ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 ಸಂಚಿಕೆ 2 ಜನವರಿ 13, 1980 40 ಪೈಸೆ

ಅರಸು ಮಂತ್ರಿಮಂಡಲದ ರಾಜೀನಾಮೆ

1980ರ ಸಾರ್ವತ್ರಿಕ ಚುನಾವಣೆಯ ಫಲಿತಾಂಶವು ಎಲ್ಲರನ್ನೂ ಚಕಿತಗೊಳಿಸಿದೆ. ಸರ್ವಾಧಿಕಾರಿ ಇಂದಿರಾ ಕಾಂಗ್ರೆಸ್ಸಿಗೆ ಲೋಕಸಭೆಯಲ್ಲಿ ಅತ್ಯಂತ ದೊಡ್ಡ ಬಹುಮತ ದೊರೆತಿದೆ. 1977ರಲ್ಲಿ ಜನತೆಯಿಂದ ತಿರಸ್ಕರಿಸಲ್ಪಟ್ಟ ಇಂದಿರಾ ಕಾಂಗ್ರೆಸ್ ಕೇಂದ್ರದಲ್ಲಿ ಪುನಃ ಅಧಿಕಾರಕ್ಕೆ ಬರುವಂತಾಗಿದೆ. ಜನತಾ, ಲೋಕದಳ ಮತ್ತು ಅರಸು ಕಾಂಗ್ರೆಸ್‌ಗಳು ಭಾರಿ ಸೋಲನ್ನನುಭವಿಸಿವೆ.

ಕೇರಳ, ಪಶ್ಚಿಮ ಬಂಗಾಳ ಮತ್ತು ತ್ರಿಪುರಾ ರಾಜ್ಯಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಎಡಪಕ್ಷಗಳ ಮತ್ತು ಪ್ರಜಾಪ್ರಭುತ್ವವಾದಿಗಳ ರಂಗ ಅದ್ಭುತ ಜಯಗಳಿಸಿದೆ. ಅಲ್ಲಿಯ ಮತದಾರರಿಗೆ ನಮ್ಮ ಹೃತ್ಪೂರ್ವಕ ಅಭಿನಂದನೆಗಳು.

ಕರ್ನಾಟಕದಲ್ಲಿ ಬೆಂಗಳೂರು ದಕ್ಷಿಣ ಕ್ಷೇತ್ರವೊಂದನ್ನು ಬಿಟ್ಟು ಇತರ 27 ಕ್ಷೇತ್ರಗಳಲ್ಲೂ ಇಂದಿರಾ ಕಾಂಗ್ರೆಸ್ಸಿಗೆ ಜಯ ಸಿಕ್ಕಿದೆ. ಅರಸು ಪಕ್ಷಕ್ಕೆ ಒಂದು ಸ್ಥಾನವೂ ಬರಲಿಲ್ಲ. ಚುನಾವಣಾ ಫಲಿತಾಂಶ ಕಂಡ ಕೂಡಲೇ ದೇವರಾಜ ಅರಸ್‌ರವರು ತಮ್ಮ ಮಂತ್ರಿಮಂಡಲದ ರಾಜೀನಾಮೆಯನ್ನು ರಾಜ್ಯಪಾಲರಿಗೆ ಸಲ್ಲಿಸಿದರು. ರಾಜ್ಯಪಾಲರು ವಿರೋಧ ಪಕ್ಷದ ನಾಯಕರಾದ ಶ್ರೀ ಗುಂಡೂರಾಯರಿಗೆ ಹೊಸಮಂತ್ರಿಮಂಡಲವನ್ನು ರಚಿಸಲು ಆಹ್ವಾನಿಸಿ 12ನೇ ತಾರೀಖಿನವರೆಗೆ ಅವಕಾಶ ಕೊಟ್ಟಿದ್ದಾರೆ. ಅರಸು ಪಕ್ಷದಿಂದ ಅನೇಕ ಮಂತ್ರಿಗಳೂ, ಶಾಸಕರೂ ಇಂದಿರಾ ಕಾಂಗ್ರೆಸ್ಸಿಗೆ ಸೇರಲು ಮುಂದೆ ಬಂದಿದ್ದಾರೆಂದು ತಿಳಿದಿದೆ. ಹೀಗೆ ಪಕ್ಷಾಂತರಗೊಳ್ಳುವುದು ಹೊಸದೇನಲ್ಲ. ಇವರ ಬೆಂಬಲದಿಂದ ಗುಂಡೂರಾಯರು ಸರಕಾರ ರಚನೆ ಮಾಡಿದರೆ ಆಶ್ಚರ್ಯವೇನಿಲ್ಲ. ಅವರ ಪಕ್ಷದಲ್ಲೇ ಕೆಲವರು ಇದನ್ನು ವಿರೋಧಿಸುತ್ತಿದ್ದಾರೆಂದು ಸುದ್ದಿ ಇದ್ದರೂ ಅವರ ಪಕ್ಷ ಮಂತ್ರಿಮಂಡಲ ರಚನೆ ಮಾಡಬಹುದೆಂದು ನಿರೀಕ್ಷಿಸಲಾಗಿದೆ.

ಸಂಪಾದಕೀಯ

ಒಂಭತ್ತು ವರ್ಷ ಅಧಿಕಾರದಲ್ಲಿದ್ದ ಅರಸು ಪಕ್ಷ ಈಗ ವಿರೋಧ ಪಕ್ಷವಾಗಿ ಬಂದಿದೆ. ತಾ. 9ರಂದು ಒಂದು ಬೃಹತ್ ಬಹಿರಂಗ ಸಭೆಯಲ್ಲಿ ಮಾತನಾಡುತ್ತಾ ಒಂದು ಬಲಿಷ್ಠ ವಿರೋಧ ಪಕ್ಷವಿರುವುದರ ಅವಶ್ಯಕತೆಯನ್ನು ಅವರು ಒತ್ತಿಹೇಳಿದರು. ಈಗ ಅನೇಕ ವಿರೋಧ ಪಕ್ಷಗಳಿದ್ದುದರಿಂದ ಅವು ಪರಿಣಾಮಕಾರಿಯಾಗಿಲ್ಲವೆಂದೂ ಅವೆಲ್ಲ ಒಂದುಗೂಡುವುದು ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ಯಶಸ್ಸಿಗೆ ಅಗತ್ಯವೆಂದೂ ಅವರು ಹೇಳಿ

[ಕಡೆಯ ಪುಟ ನೋಡಿ]

ತ್ರಿಪುರಾ ಎಡರಂಗ ಸರಕಾರದ ಎರಡು ವರ್ಷಗಳು

ತ್ರಿಪುರಾ ರಾಜ್ಯದ ಆಡಳಿತಾರೂಢ ಎಡರಂಗ ಸರಕಾರ ಜನವರಿ ಐದರಂದು ಅಧಿಕಾರಕ್ಕೆ ಬಂದು ಎರಡು ವರ್ಷಗಳಾಯಿತು. ಸಂವಿಧಾನದ ಇತಿಮಿತಿಯಲ್ಲಿ ಕೆಲಸ ಮಾಡಬೇಕಾಗಿರುವ ಎಡರಂಗ ಸರಕಾರ ಈಗಾಗಲೇ ಜನತೆಗೆ ನೀಡಿದ್ದ ಭರವಸೆಗಳನ್ನು ಈಡೇರಿಸಿದೆ. ದುಡಿಯುವ ವರ್ಗಕ್ಕೆ ಸಹಾಯ ಮಾಡುವುದರ ಜೊತೆಯಲ್ಲಿ, ಮುಖ್ಯವಾಗಿ ಭೂಮಿಯನ್ನು ಗುಡ್ಡಗಾಡು ಜನಗಳಿಗೆ ಉಳಿಸಿಕೊಟ್ಟಿರುವುದು ಹಾಗೂ ಗುಡ್ಡಗಾಡು ಜನರೇ ಹೆಚ್ಚಾಗಿರುವ ಪ್ರದೇಶವನ್ನು ಸ್ವಯಮಾಡಳಿತ ಜಿಲ್ಲೆಯನ್ನಾಗಿ ಮಾಡಲಾಗಿದೆ. ಚುನಾವಣಾ ಘೋಷಣೆಯಲ್ಲಿ ನೀಡಿದ್ದ ಭರವಸೆಗಳನ್ನು ಈಡೇರಿಸುವುದರ ಮೂಲಕ ಜನರ ಜೀವನ ಮಟ್ಟವನ್ನು ಸುಧಾರಿಸಲು ಪ್ರಾಮಾಣಿಕ ಪ್ರಯತ್ನಗಳು ನಡೆಯುತ್ತಿವೆ. ಎಡಶಕ್ತಿಗಳು ಮಾತ್ರ ರಾಜ್ಯದಲ್ಲಿ ಶುದ್ಧ, ಪ್ರಾಮಾಣಿಕ ಹಾಗೂ ಸ್ಪರ್ಧಾತ್ಮಕ ಆಡಳಿತ ನೀಡಲು ಸಾಧ್ಯವಾಗಿದೆಯಲ್ಲದೆ ಜನಗಳಲ್ಲಿ ಪ್ರಜಾಸತ್ತಾತ್ಮಕ ಮೌಲ್ಯಗಳ ಬಗ್ಗೆ ಅರಿವನ್ನು ಆಳವಾಗಿ ಮೂಡಿಸುವುದಕ್ಕೆ, ಬೆಳೆಸುವುದಕ್ಕೆ ಸರಕಾರ ಪ್ರಯತ್ನಿಸುತ್ತಿದೆ. ಸಿ. ಪಿ. ಐ. (ಎಂ) ನೇತೃತ್ವದ ಎಡರಂಗ ಸರಕಾರ ಕೇವಲ ಎರಡು ವರ್ಷಗಳಲ್ಲಿ ಇದನ್ನು ಸಾಧಿಸಿದೆ. ಯಾವುದನ್ನು ಭೂಮಾಲಕ, ಬಂಡವಾಳಶಾಹಿಗಳ ಪರವಾದ ಕಾಂಗ್ರೆಸ್ ಸರಕಾರ ಮುವತ್ತು ವರ್ಷಗಳಲ್ಲಿ ಸಾಧಿಸಲುಸಾಧ್ಯವಾಗಲಿಲ್ಲವೋ ಅದನ್ನು ಎಡರಂಗ ಸರಕಾರ ಎರಡು ವರ್ಷಗಳಲ್ಲಿ ಮಾಡಿ ತೋರಿಸಿದೆ. ಮುವತ್ತು ವರ್ಷಗಳ ಭ್ರಷ್ಟ ಆಡಳಿತವನ್ನು ಸರಿಪಡಿಸಲು ಎಡರಂಗ ಸರಕಾರ ತನ್ನ ಪ್ರಯತ್ನಗಳನ್ನು ಪ್ರಾರಂಭಿಸಿತು. ತ್ರಿಪುರಾದ ಹದಿನೆಂಟು ಲಕ್ಷ ಜನತೆ ಇದೇ ಮೊಟ್ಟ ಮೊದಲ ಬಾರಿಗೆ ರಾಜ್ಯದಲ್ಲಿ ನಿಜವಾದ ಪ್ರಜಾಸತ್ತಾತ್ಮಕ ಆಡಳಿತವನ್ನು ಎಡರಂಗ ಸರಕಾರದ ಮೂಲಕ ಕಂಡಿದ್ದಾರೆ. ತ್ರಿಪುರಾದ ಜನತೆ, ಕೇವಲ ಎಡಪಕ್ಷಗಳು ಮಾತ್ರ ಅವರ ಸಮಸ್ಯೆಗಳನ್ನು ಬಗೆಹರಿಸಲು, ದುಡಿಯುವ ವರ್ಗದ ಹಿತವನ್ನು ಕಾಪಾಡಲು ಹಾಗೂ ಸಾಮಾಜವಾದಿ

[ಕಡೆಯ ಪುಟ ನೋಡಿ]

ಲೋಕಸಭಾ ಚುನಾವಣಾ ಫಲಿತಾಂಶ
ಎಡಶಕ್ತಿಗಳು ದುರ್ಬಲವಿರುವಲ್ಲಿ ಕಾಂಗ್ರೆ ಜಯ

ಹಠಾತ್ತಾಗಿ ಬಂದೊದಗಿದ ಲೋಕಸಭಾ ಚುನಾವಣೆಯು ಅಸ್ಸಾಂ ರಾಜ್ಯದ (ಅಲ್ಲಿಯ ಎರಡು ಸ್ಥಾನಗಳ ಹೊರತು) ಹೊರತು ಇನ್ನೆಲ್ಲಾ ಕಡೆ ನಡೆದು, ಇದೀಗ ಫಲಿತಾಂಶ ಹೊರಬಂದಿದೆ. ಇದನ್ನು ಬರೆಯುವ ಹೊತ್ತಿಗೆ ಪ್ರಕಟವಾದ ಫಲಿತಾಂಶದಲ್ಲಿ 351 ಸ್ಥಾನಗಳು ಇಂದಿರಾ ಕಾಂಗ್ರೆಸ್ಸಿಗೆ ದೊರೆತಿದ್ದು, ಎಲ್ಲರ ಲೆಕ್ಕಾಚಾರವನ್ನು ಮೀರಿ ಕಾಂಗ್ರೆ ಜಯಗಳಿಸಿದೆ. ರಾಷ್ಟ್ರದ ಹೆಚ್ಚಿನ ರಾಜ್ಯಗಳಲ್ಲಿ ಬಹು ಸಂಖ್ಯೆಯಲ್ಲಿ ಸ್ಥಾನಗಳನ್ನು ಗಳಿಸಿದ ಕಾಂಗ್ರೆಗೆ ಕೇರಳ, ಪಶ್ಚಿಮ ಬಂಗಾಳ ಮತ್ತು ತ್ರಿಪುರಾ ರಾಜ್ಯಗಳಲ್ಲಿ ಅಷ್ಟೇ ಸೋಲಾಗಿದೆ. ಕೇರಳ ರಾಜ್ಯದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಎಡ ಪ್ರಜಾಪ್ರಭುತ್ವ ರಂಗವು 20 ರಲ್ಲಿ 12 ಸ್ಥಾನವನ್ನು ಗಳಿಸಿದೆ. ಪಶ್ಚಿಮ ಬಂಗಾಲದಲ್ಲಿ ಚುನಾವಣೆ ನಡೆದು ಫಲಿತಾಂಶ ದೊರೆತ 41 ಸ್ಥಾನಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಎಡರಂಗವು 37 ಸ್ಥಾನಗಳನ್ನು ಗಳಿಸಿದೆ. ತ್ರಿಪುರಾ ರಾಜ್ಯದಲ್ಲಿ ಎರಡು ಸ್ಥಾನಗಳಲ್ಲೂ ಎಡರಂಗದ ಬೆಂಬಲದಿಂದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಗಳು ಜಯಗಳಿಸಿದ್ದಾರೆ. ಮತಗಳ ಲೆಕ್ಕಾಚಾರವನ್ನು ತೆಗೆದುಕೊಂಡರೂ, ಎಡರಂಗ ಮತ್ತು ಎಡ ಪ್ರಜಾಪ್ರಭುತ್ವ ರಂಗದ ಅಭ್ಯರ್ಥಿಗಳು ಸೋತಲ್ಲಿ ಮತಗಳ ಅಂತರ ಕಡಿಮೆ.

ಚುನಾವಣಾ ಫಲಿತಾಂಶದ ಬಗ್ಗೆ ಅಧಿಕಾರವಾಣಿಯಲ್ಲಿ ಹೇಳಬೇಕಾದರೆ ಸಾಕಷ್ಟು ವಿಮರ್ಶೆ ನಡೆಸಬೇಕಾದರೂ ಒಂದೆರಡು ವಿಚಾರಗಳಂತೂ ಸ್ಪಷ್ಟ. ಜನತಾಪಕ್ಷದ ಹಾಗೂ ಆಮೇಲೆ ಲೋಕದಳ ಒಕ್ಕೂಟದ ಆಡಳಿತದ ಕಾಲದಲ್ಲಿ ಸರಕಾರವೇ ಇಲ್ಲ ಎಂಬ ಪರಿಸ್ಥಿತಿಯುಂಟಾಗಿದ್ದು, ಜನತೆಯು ಈ ಸ್ಥಿತಿಗಿಂತ ಇಂದಿರಾ ಗಾಂಧಿಯ ಆಡಳಿತ (ದುರಾಡಳಿತವಾದರೂ) ಆಗಬಹುದೆಂದು ಯೋಚಿಸಿದಂತಿದೆ. ಆದರೆ ಎಲ್ಲಿ ಎಡರಂಗ ಮತ್ತು ಎಡ ಪ್ರಜಾಪ್ರಭುತ್ವ ರಂಗಗಳು ಇಂದಿರಾ ಕಾಂಗ್ರೆಸ್ ಮತ್ತು ಇತರ ಭೂಮಾಲೀಕ ಬಂಡವಾಳಶಾಹಿ ಪಕ್ಷಗಳಿಗೆ ಬದಲಿಯಾಗಿ ಜನತೆಗೆ ಕಂಡುಬಂದಿದೆಯೋ ಅಲ್ಲಿ, ಅಂದರೆ ಕೇರಳ, ಬಂಗಾಳ ಮತ್ತು ತ್ರಿಪುರಾ ರಾಜ್ಯಗಳಲ್ಲಿ ಫಲಿತಾಂಶವೇ ಬೇರೆಯೇ ಆಗಿದೆ. ಹಾಗೆಯೇ ಜನತೆಯಲ್ಲಿ ಸಾಕಷ್ಟು ರಾಜಕೀಯ ಪ್ರಜ್ಞೆ ಇಲ್ಲದಿರುವುದೂ ಕಾಂಗ್ರೆ ಜಯಕ್ಕೆ ಕಾರಣವಿರಬಹುದು.

ಕರ್ನಾಟಕ ರಾಜ್ಯದಲ್ಲಿ 28 ಸ್ಥಾನಗಳಲ್ಲಿ 27 ಸ್ಥಾನಗಳನ್ನೂ

[ಕಡೆಯ ಪುಟ ನೋಡಿ]

ಕೃತಜ್ಞತೆ

ಲೋಕಸಭಾ ಚುನಾವಣೆಯಲ್ಲಿ ಮಂಗಳೂರು ಲೋಕಸಭಾ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿಗಾಗಿ ಶ್ರಮಿಸಿದ ಪಕ್ಷದ ಕಾರ್ಯಕರ್ತರುಗಳು ಸದಸ್ಯರು, ಹಿತೈಷಿಗಳು ಮತ್ತು ಸ್ನೇಹಿತರು ಮತ್ತು ಪಕ್ಷದ ಅಭ್ಯರ್ಥಿಗೆ ಮತವಿತ್ತ ಜನತೆಗೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಸಮಿತಿಯ ಸೆಕ್ರೆಟಾರಿಯೆಟ್ ಕೃತಜ್ಞತೆಯನ್ನು ಸಲ್ಲಿಸುತ್ತದೆ. ರಾಜ್ಯದ ಇತರ ಕ್ಷೇತ್ರಗಳಲ್ಲಿ ಸರ್ವಾಧಿಕಾರಿ ಮತ್ತು ಕೋಮುಶಕ್ತಿಗಳನ್ನು ಸೋಲಿಸಲು ಪ್ರಯತ್ನಿಸಿದ ಎಲ್ಲರಿಗೂ ಮತ್ತು ಮತವಿತ್ತ ಜನತೆಗೂ ಸೆಕ್ರೆಟಾರಿಯೆಟ್ ವಂದನೆಗಳನ್ನು ಸಲ್ಲಿಸುತ್ತದೆ.

ರಾಜ್ಯದಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಒಗ್ಗೂಡಿಸಿ ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳ ರಕ್ಷಣೆಗೂ, ಸಮಸ್ತ ದುಡಿಯುವ ಜನಸಮುದಾಯದ ಹಿತರಕ್ಷಣೆಗಾಗಿಯೂ ಶ್ರಮಿಸುವ ತನ್ನ ಪ್ರಯತ್ನವನ್ನು ಇನ್ನೂ ಹೆಚ್ಚಿನ ಸ್ಫೂರ್ತಿಯಿಂದ ಮುಂದುವರಿಸುವ ಆಶ್ವಾಸನೆಯನ್ನು ರಾಜ್ಯದ ಜನತೆಗೆ ಸೆಕ್ರೆಟಾರಿಯೆಟ್ ಕೊಡುತ್ತದೆ.

ಜೆ. ವಿ. ಸ್ಟಾಲಿನ್ ಜನ್ಮ ಶತಾಬ್ದಿಯ ಸ್ಮರಣೆ

ಜೋಸೆಫ್ ವಿಸಾರಿಯನೋವಿಶ್ ಸ್ಟಾಲಿನ್ (ಮೂಲ ಹೆಸರು ಜಾಸೆಫ್ ವಿಸಾರಿಯನೋವಿಶ್ ಜುಗಾಶ್ವಿಲಿ) ಜನಿಸಿ ಡಿಸೆಂಬರ್ 21, 1979ಕ್ಕೆ ನೂರು ವರ್ಷಗಳು ಸಂದವು. ಜಗತ್ತಿನಾದ್ಯಂತ ಮಾರ್ಕ್ಸ್‌ವಾದಿಗಳು, ಪ್ರಜಾಸತ್ತೆ ಮತ್ತು ಸಮಾಜವಾದಕ್ಕಾಗಿ ಹೋರಾಡುತ್ತಿರುವ ಜನತೆ ಇಪ್ಪತ್ತನೇ ಶತಮಾನದ ಈ ಮಹಾ ನಾಯಕನ ಹೆಸರನ್ನು ಅವರ ಜನ್ಮ ಶತಾಬ್ದಿಯ ಸಂದರ್ಭದಲ್ಲಿ ಕೃತಜ್ಞತೆಯಿಂದ ಸ್ಮರಿಸುತ್ತಿದ್ದಾರೆ. ಸೋವಿಯೆತ್ ಸಮಾಜವಾದಿ ಕ್ರಾಂತಿಯನ್ನು ಸ್ಥಿರಗೊಳಿಸಿ ನಾಝಿ ಸರ್ವಾಧಿಕಾರಿಗಳ ಆಕ್ರಮಣವನ್ನು ಬಗ್ಗುಬಡಿಯುವಷ್ಟು ಸೋವಿಯೆತ್ ರಷ್ಯಾವನ್ನು ಪ್ರಬಲ ರಾಷ್ಟ್ರವಾಗಿ ಬೆಳೆಸುವಲ್ಲಿ ಸ್ಟಾಲಿನ್ನರ ಕೊಡುಗೆ ಅಮೋಘವಾದದ್ದು. ಸ್ಟಾಲಿನ್ ಕಾಲದಲ್ಲಿ ಸೋವಿಯೆತ್ ಜನತೆ ಹೊಸ ಇತಿಹಾಸವನ್ನೇ ನಿರ್ಮಿಸಿದ್ದಾರೆ. ಸೋವಿಯೆತ್ ಕ್ರಾಂತಿ ಮತ್ತು ಸಮಾಜವಾದಿ ಗಣರಾಜ್ಯ ಸ್ಥಾಪನೆಗೆ ಲೆನಿನ್ ಅವರ ಕೊಡುಗೆ ಎಷ್ಟು ಮಹತ್ವದ್ದೋ ಅಷ್ಟೇ ಮಹತ್ವಪೂರ್ಣವಾದದ್ದು ಸೋವಿಯೆತ್ ಒಕ್ಕೂಟದಲ್ಲಿ ಸಮಾಜವಾದದ ವಿಕಸನ ಮತ್ತು ಅದರ ಬಲ ವರ್ಧನೆಗೆ ಸ್ಟಾಲಿನ್ ನೀಡಿದ ದೇಣಿಗೆ ಈ ಯಶಸ್ಸನ್ನು ಸಾಧಿಸುವ ವೇಳೆ ಕೆಲವೊಂದು ಪ್ರಮಾದಗಳೂ ಸಂಭವಿಸಿವೆ; ಕೆಲವು ತಪ್ಪುಗಳಾಗಿವೆ. ಆದರೆ ಸ್ಟಾಲಿನ್ ಯುಗದ ಮಹತ್ಸಾಧನೆಗಳನ್ನು ಗಮನಿಸಿದರೆ ಅವರ ಮರಣಾನಂತರ ಬಹಿರಂಗಗೊಳಿಸಲ್ಪಟ್ಟ ಮತ್ತು ಸ್ಟಾಲಿನ್ ಕಾಲದಲ್ಲಿ ನಡೆದುಹೋದ ಪ್ರಮಾದಗಳು ತೀರಾ ಅಲ್ಪ ಪ್ರಮಾಣದ್ದೆಂದೇ ಹೇಳಬೇಕು. ಸ್ಟಾಲಿನ್ ಜೀವನ ಚರಿತ್ರೆ 'ಸ್ಟಾಲಿನ್ ಇರಾ' ಬರೆದಿರುವ ಅಮೇರಿಕನ್ ಪತ್ರಕರ್ತೆ ಅನ್ನಾಲೂಯಿಸ್ ಸ್ಟ್ರಾಂಗ್ ಸ್ಟಾಲಿನ್ ಯುಗದ ಬಗ್ಗೆ ಹೀಗೆಂದಿದ್ದಾರೆ. "ಸ್ಟಾಲಿನ್ ಕಾಲವೆಂದರೆ ಇತಿಹಾಸದ ಅಮೋಘ ಗತಿಶೀಲ ಕಾಲ; ಅದು ರಶಿಯಾದ ಮಾತ್ರವಲ್ಲ ಇಡೀ ಪ್ರಪಂಚದ ಸ್ವರೂಪವನ್ನೇ ಬದಲಾಯಿಸಿದೆ. ತನ್ನ ಕಾಲದಲ್ಲಿ ಜೀವಿಸಿದ್ದ ಪ್ರತಿಯೊಬ್ಬನ ಜೀವಿತದ ಮೇಲೂ ಅದು ಪ್ರಭಾವ ಬೀರಿದೆ. ಈ ಕಾಲದ ಕುಂದುಕೊರತೆಗಳನ್ನು ಮಾತ್ರ ಗಣನೆಗೆ ತೆಗೆದುಕೊಂಡು ಅವುಗಳನ್ನು ತೀರಾ ಸಣ್ಣ ಮನುಷ್ಯರು ಮಾತ್ರ ಅತಿಶಯೋಕ್ತಿಮಾಡಬಹುದು. ಆದರೆ ಈ ಸಮರದಲ್ಲಿ ಬದುಕಿದ್ದ ಅಥವಾ ಅದಕ್ಕಾಗಿ ಮಡಿದ ಜನ ಈ ಎಲ್ಲ ಕುಂದುಕೊರತೆಗಳನ್ನೂ ಲೋಪದೋಷಗಳನ್ನೂ ತಾವು ಕಟ್ಟುತ್ತಿದ್ದ ಸಮಾಜಕ್ಕಾಗಿ ತೆರಬೇಕಾದ ಬೆಲೆಯೆಂದೇ ಭಾವಿಸಿದ್ದರು."

ದುರದೃಷ್ಟವಶಾತ್ ಸ್ಟಾಲಿನ್ನರ ಜೀವಿತಾವಧಿಯಲ್ಲಿ ಯಾರು ಅವರನ್ನು ಹೆಚ್ಚುಕಡಿಮೆ ದೈವತ್ವಕ್ಕೇರಿಸಿದ್ದರೋ ಅದೇ ಮಂದಿ ಸ್ಟಾಲಿನ್ ಮರಣಾನಂತರ ಅವರ ಕಟು ಟೀಕಾಕಾರರಾದರು. ಒಮ್ಮೆ ಹಲವಾರು ಸದ್ಗುಣಗಳ ಸಾಕಾರಮೂರ್ತಿಯೆನಿಸಿದ್ದ ಸ್ಟಾಲಿನ್ ಇದೇ ಜನರ ಕಣ್ಣಿನಲ್ಲಿ 'ಸರ್ವಾಧಿಕಾರಿ'ಯಾಗಿಬಿಟ್ಟಿದ್ದಾರೆ. ಸ್ಟಾಲಿನ್ನರನ್ನು ಟೀಕಿಸುವ ಭರದಲ್ಲಿ ಈ ಜನ ತಮ್ಮ ಬೌದ್ಧಿಕ ಸಮತೋಲವನ್ನೂ ಕಳೆದುಕೊಳ್ಳುತ್ತಾರೆ. ಹಾಗಾಗಿ ಸ್ಟಾಲಿನ್ನರ ಸಾಧನೆ ಮತ್ತು ವೈಫಲ್ಯಗಳನ್ನು ನಿಷ್ಪಾಕ್ಷಿಕ ದೃಷ್ಟಿಯಿಂದ ವಿವೇಚಿಸಿ ಅವುಗಳ ಮೌಲ್ಯಮಾಪನ ಮಾಡಬೇಕಾದುದು ಅಗತ್ಯವೆನಿಸಿದೆ. ಸ್ಟಾಲಿನ್ ಸಾಧಿಸಿದ ಅದ್ಭುತ ಯಶಸ್ಸಿನಿಂದ ಸ್ಫೂರ್ತಿ ಪಡೆಯುವಂತೆಯೇ ಅವರ ವ್ಯಕ್ತಿತ್ವ ಮತ್ತು ಕಾರ್ಯವಿಧಾನಗಳಲ್ಲಿದ್ದ ಲೋಪದೋಷಗಳಿಂದಲೂ ಬಹಳಷ್ಟು ಪಾಠ ಕಲಿಯಬೇಕಾಗಿದೆ.

ಇದರರ್ಥ ಸ್ಟಾಲಿನ್ನರ ಸುತ್ತ ಬೆಳೆದು ಬಂದ ವ್ಯಕ್ತಿಪೂಜೆಯ ವಿವಿಧ ಪ್ರಕಾರಗಳು ಸೋವಿಯೆತ್ ಸಮಾಜ ಹಾಗೂ ಜಾಗತಿಕ ಕಮ್ಯುನಿಸ್ಟ್ ಚಳುವಳಿಯಲ್ಲಿ ಸೃಷ್ಟಿಸಿದ ಕೆಲವು ವಿಕೃತಿಗಳು ಮತ್ತು ಸೋವಿಯೆತ್ ಹಾಗೂ ಜಾಗತಿಕ ಕ್ರಾಂತಿಗೆ ಅವು ಉಂಟುಮಾಡಿದ ಹಾನಿಯನ್ನು ಅಲಕ್ಷಿಸುವುದೆಂದಲ್ಲ. ಸ್ಟಾಲಿನ್ನರ ವ್ಯಕ್ತಿತ್ವ ಮತ್ತು ಕಾರ್ಯವಿಧಾನಗಳ ಒಳಿತುಕೆಡುಕುಗಳ ಬಗ್ಗೆ ನಿಷ್ಪಾಕ್ಷಿಕ ಮೌಲ್ಯಮಾಪನ ಮಾಡಬೇಕಾದರೆ ಮೊದಲು ಲೆನಿನ್ ಅವರ ಸ್ಥಾನಕ್ಕೆ ಸ್ಟಾಲಿನ್ ಬಂದಾಗ ಸೋವಿಯೆತ್ ಒಕ್ಕೂಟದ ಒಳಗೂ ಹೊರಗೂ ಎಂತಹ ಪರಿಸ್ಥಿತಿಯಿತ್ತೆಂಬುದನ್ನು ಅಗತ್ಯವಾಗಿ ತಿಳಿದುಕೊಳ್ಳಬೇಕು. ಮೂರು ದಶಕಗಳ ಕಾಲ ಸ್ಟಾಲಿನ್ ಎದುರಿಸಿದ ಸಮಸ್ಯೆಗಳು ಉದ್ಭವಿಸಿರಲು ಆ ಕಾಲದ ವಿಶಿಷ್ಟ ಪರಿಸ್ಥಿತಿ ಕಾರಣ. ಈ ಭೀಕರ ಸಮಸ್ಯೆಗಳನಡುವೆ ಮತ್ತು ತನ್ನ ಸುತ್ತುಮುತ್ತ ಶತ್ರುಗಳು ಆವರಿಸಿಕೊಂಡಿದ್ದಾಗಲೂ ರಷ್ಯಾವನ್ನೂ ಜಾಗತಿಕ ಕಮ್ಯುನಿಸ್ಟ್ ಚಳುವಳಿಯನ್ನೂ ಮುನ್ನಡೆಸಿದುದೇ ಸ್ಟಾಲಿನ್ನರ ಹಿರಿಮೆ.

ಸ್ಟಾಲಿನ್ ಅಧಿಕಾರಕ್ಕೆ ಬಂದಾಗ ಸೋವಿಯೆತ್ ಒಕ್ಕೂಟ ಆದೇ ತಾನೇ ಎರಡು ಯುದ್ಧಗಳಿಂದ ಜರ್ಝರಿತವಾಗಿತ್ತು. "ಯುದ್ಧದ ಕಮ್ಯುನಿಸಂ"ನಿಂದ ತುಸುವೇ ಚೇತರಿಸಿಕೊಂಡು 'ನವ ಆರ್ಥಿಕ ಧೋರಣೆ'ಯ ಪಥದಲ್ಲಿ ಸಾಗಲು ಅದು ಪ್ರಯತ್ನಿಸುತ್ತಿತ್ತು. ಬಹುಕಾಲದ ನಂತರ ಸೋವಿಯೆತ್ ಜನತೆಗೆ ಉಸಿರಾಡಲು ಸಿಕ್ಕಿದ ಈ ಅವಕಾಶವನ್ನು ಬಳಸಿಕೊಂಡು ಸಮಾಜವಾದಿ ರಾಷ್ಟ್ರ ನಿರ್ಮಾಣದತ್ತ ಅವರು ಸಾಗಲು ಯತ್ನಿಸುತ್ತಿದ್ದರು. ಅಂತರಾಷ್ಟ್ರೀಯ ರಂಗದಲ್ಲೂ ಈ ಕಾಲಕ್ಕೆ ಮಹತ್ವಪೂರ್ಣ ಬದಲಾವಣೆಗಳಾಗಿದ್ದವು 'ಎರಡನೇ ಅಂತರಾಷ್ಟ್ರೀಯದ' ಬಲ ಸಂದರ್ಭಸಾಧಕತನದಿಂದ ರೋಸಿಹೋಗಿದ್ದ ಜಾಗತಿಕ ಕ್ರಾಂತಿಕಾರಿ ಶಕ್ತಿಗಳು ಕಮ್ಯುನಿಸ್ಟ್ ಪಕ್ಷಗಳಾಗಿ ರೂಪುಗೊಂಡು ಕಮ್ಯುನಿಸ್ಟ್ ಇಂಟರ್‌ನ್ಯಾಶನಲ್‌ನ ಕೇಂದ್ರೀಕೃತ ವಿಶ್ವ ಸಂಘಟನೆಯೊಂದನ್ನು ನಿರ್ಮಿಸಿಕೊಳ್ಳುವ ಮೂಲಕ ಒಂದೇ ಜಾಗತಿಕ ದೃಷ್ಟಿಕೋನವನ್ನು ತಳೆದಿದ್ದವು. ವಿಜ್ಞಾನ, ಕಲೆ ಇತ್ಯಾದಿ ಕ್ಷೇತ್ರದಲ್ಲಿ ಸಮರ್ಪಕ ಮನೋಭಾವದಿಂದ ದುಡಿಯುವ ಸಕ್ರಿಯ ಕಾರ್ಯಕರ್ತರಿಗೆ ತರಬೇತಿ ನೀಡಲಾಗುತ್ತಿತ್ತು. ಈ ಸಮರಧೀರ ಜನರು ಸ್ವಯಂಪ್ರೇರಣೆಯಿಂದ ವರ್ಗ ಹೋರಾಟಗಳಲ್ಲಿ ಮುಂಬರುತ್ತಿದ್ದರು. ಇದೇ ವೇಳೆಗೆ ಲೆನಿನ್ನರ ದೇಹಾಂತವಾದುದು ಸೋವಿಯೆತ್ ಒಕ್ಕೂಟ ಮತ್ತು ಜಾಗತಿಕ ಕಮ್ಯುನಿಸ್ಟ್ ಚಳುವಳಿಗೆ ಉಂಟಾದ ದೊಡ್ಡ ನಷ್ಟ. ಕ್ರಾಂತಿಕಾರಿ ಚಳುವಳಿ ಲೆನಿನ್ನರ ಮರಣದಿಂಧ ತಬ್ಬಲಿಯಾದಂತಾಯಿತು. ಆದರೆ ಲೆನಿನ್ ಉತ್ಕೃಷ್ಟವಾದ ಪರಂಪರೆಯೊಂದನ್ನು ಬಿಟ್ಟುಹೋಗಿದ್ದರು. ಈ ಅಮೂಲ್ಯ ಪರಂಪರೆಯ ತಳಹದಿಯ ಮೇಲೆ ಸೋವಿಯೆತ್ ಒಕ್ಕೂಟವನ್ನೂ ಜಾಗತಿಕ ಕಮ್ಯುನಿಸ್ಟ್ ಚಳುವಳಿಯನ್ನೂ ಮುನ್ನಡೆಸಿಕೊಂಡು ಹೋಗಲು ಸಮರ್ಥ ಮುಂದಾಳುವೊಬ್ಬ ಬೇಕಾಗಿತ್ತು. ಸ್ಟಾಲಿನ್ ಈ ಅವಶ್ಯಕತೆಯನ್ನು ಪೂರೈಸಿದರು. ತನ್ನ ಮೇಲೆ ಬಂದಿದ್ದ ಹೊಣೆಗಾರಿಕೆಯನ್ನು ಸಮರ್ಥ ರೀತಿಯಲ್ಲಿ ನಿಭಾಯಿಸುವ ಮೂಲಕ ಲೆನಿನ್ನರ ಅಂತ್ಯ ಸಂಸ್ಕಾರದ ವೇಳೆ ತಾನು ಕೈಗೊಂಡಿದ್ದ ಪ್ರತಿಜ್ಞೆಯನ್ನು ಸ್ಟಾಲಿನ್ ಪರಿಪೂರ್ಣವಾಗಿ ನೆರವೇರಿಸಿದ್ದಾರೆ.

ಟ್ರಾಟ್ಸ್ಕಿವಾದದ ವಿರುದ್ಧ ಹೋರಾಟ:

ಸ್ಟಾಲಿನ್ ಎದುರಿಸಿದ ಪಂಥಾಹ್ವಾನಗಳಲ್ಲಿ ಮೊದಲನೆಯದು ಟ್ರಾಟ್ಸ್ಕಿವಾದದ ವಿರುದ್ಧ ಅವರು ನಡೆಸಿದ ಹೋರಾಟ. ಲೆನಿನ್ನರ ವಿಚಾರಧಾರೆ ಟ್ರಾಟ್ಸ್ಕಿಯ ಕೈಯಲ್ಲಿ ವಿಕೃತವಾಗುತ್ತಿದ್ದುದನ್ನು ತಪ್ಪಿಸಿ ಅದನ್ನು ಉಳಿಸಬೇಕಾಗಿತ್ತು. "ಫೌಂಡೇಶನ್ಸ್ ಆಫ್ ಲೆನಿನಿಸಂ", "ಪ್ರಾಬ್ಲಮ್ಸ್ ಆಫ್ ಲೆನಿನಿಸಂ" ಇತ್ಯಾದಿ ಅಮೋಘ ಕೃತಿಗಳ ಮೂಲಕ ಸ್ಟಾಲಿನ್. ಲೆನಿನ್‌ವಾದವನ್ನು ವಿಕೃತಗೊಳಿಸಬಯಸುವವರ ವಿರುದ್ಧ ಸೈದ್ಧಾಂತಿಕ ಹೋರಾಟನಡೆಸಿ ಅಂತವರಪ್ರಯತ್ನಗಳನ್ನು ವಿಫಲಗೊಳಿಸಿದರು. ಕ್ರಾಂತಿಕಾರಿ ಚಳುವಳಿಯ ನಡುವೆ ನುಸುಳಿಕೊಳ್ಳುವ ಪ್ರತಿಗಾಮಿ ಸಿದ್ಧಾಂತಗಳ ವಿರುದ್ಧ ಸ್ಟಾಲಿನ್ ನಡೆಸಿದ ಈ ಹೋರಾಟ ಐತಿಹಾಸಿಕವೆನಿಸಿದೆ ಈ ಹೋರಾಟದಲ್ಲಿ ಗಳಿಸಿದ ವಿಜಯದಿಂದಾಗಿ ಸೋವಿಯತ್ ಒಕ್ಕೂಟದ ಕಮ್ಯುನಿಸ್ಟ್ ಪಕ್ಷಕ್ಕೆ ಲೆನಿನ್ನರ ವಿಚಾರಗಳನ್ನು ಕ್ರಿಯೆಯಲ್ಲಿ ಅನುಷ್ಠಾನಕ್ಕೆ ತರುವುದು ಸಾಧ್ಯವಾಯಿತು. ತೀರಾ ಹಿಂದುಳಿದ ರಾಷ್ಟ್ರವೊಂದು ಜಗತ್ತಿನ ಅತ್ಯಂತ ಮುಂದುವರಿದ ರಾಷ್ಟ್ರಗಳಿಗೆ ಸವಾಲೆಸೆಯುವಷ್ಟು ಬೆಳೆಯುವಂತಾಯಿತು.

ಸೋವಿಯತ್ ಒಕ್ಕೂಟದ ಪ್ರಥಮ ಪಂಚವಾರ್ಷಿಕ ಯೋಜನೆ ಮತ್ತು ಅದು ತೀವ್ರ ಔದ್ಯಮೀಕರಣ ಹಾಗೂ ಸಾಮೂಹಿಕ ಕೃಷಿಗಾಗಿ ನೀಡಿದ ಮಹತ್ವದಿಂದಾಗಿ ಗಳಿಸಿದ ಅಪೂರ್ವ ಯಶಸ್ಸು ಇದೀಗ ಇತಿಹಾಸದ ಭಾಗವಾಗಿದೆ. ಜಗತ್ತಿನ ಇತರ ಎಲ್ಲ ರಾಷ್ಟ್ರಗಳೂ ಆರ್ಥಿಕ ಮುಗ್ಗಟ್ಟಿನ ಹೊರೆಯಲ್ಲಿ ನುಗ್ಗಾಗುತ್ತಿದ್ದಾಗ ಸೋವಿಯೆತ್ ಒಕ್ಕೂಟವೊಂದೇ ತನ್ನ ಆರ್ಥಿಕತೆಯ ಆರೋಗ್ಯವನ್ನು ಕಾಪಾಡಿಕೊಂಡು ಪ್ರಥಮ ಪಂಚವಾರ್ಷಿಕ ಯೋಜನೆಯನ್ನು ಯಶಸ್ವಿಯಾಗಿ ಪೂರೈಸಿತು. ಇದು ಬಂಡವಾಳಶಾಹಿ ವ್ಯವಸ್ಥೆಯ ಮೇಲೆ ಸಮಾಜವಾದಿ ವ್ಯವಸ್ಥೆ ತನ್ನ ಉತ್ತಮಿಕೆಯನ್ನು ಮೆರೆದುದಕ್ಕೆ ನಿದರ್ಶನ. ಸೋವಿಯತ್ ಕಮ್ಯುನಿಸ್ಟ್ ಪಕ್ಷದ ಮತ್ತು ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್‌ನ ಕೇಂದ್ರ ಸಮಿತಿಯ ನೇತಾರರಾಗಿ ಸ್ಟಾಲಿನ್ ಈ ಕಾಲಘಟ್ಟದಲ್ಲಿ ಕ್ಲಿಷ್ಟವಾದ ಅನೇಕ ಆರ್ಥಿಕ ರಾಜಕೀಯ, ಸೈದ್ಧಾಂತಿಕ ಮತ್ತು ಸಾಂಸ್ಥಿಕ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಒಂದೆಡೆ ಸೋವಿಯೆತ್ ಒಕ್ಕೂಟವನ್ನೂ, ಇನ್ನೊಂದೆಡೆ ವಿಶ್ವ ಕಮ್ಯುನಿಸ್ಟ್ ಚಳುವಳಿಯನ್ನೂ ಬಾಧಿಸುತ್ತಿದ್ದ ಈ ಸಮಸ್ಯೆಗಳನ್ನು ದಕ್ಷ ರೀತಿಯಿಂದ ಎದುರಿಸಿದ ಸ್ಟಾಲಿನ್ ಸೋವಿಯೆತ್ ಒಕ್ಕೂಟ ಮತ್ತು ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್‌ನ ಅತ್ಯಂತ ಸಮರ್ಥ ಮುಂದಾಳುವೆನ್ನುವುದರಲ್ಲಿ ಸಂದೇಹವಿಲ್ಲ.

ಜಗತ್ತಿನ ಮೊದಲ ಸಮಾಜವಾದಿ ರಾಷ್ಟ್ರವಾಗಿದ್ದ ಸೋವಿಯೆತ್ ರಷ್ಯಾ ಮತ್ತು ವಿಶ್ವಕಮ್ಯುನಿಸ್ಟ್ ಚಳುವಳಿ ಇವೆರಡಕ್ಕೂ ಪ್ರವರ್ಧಮಾನಕ್ಕೆ ಬರಲು ಆ ಕಾಲದಲ್ಲಿ ಅಪಾರ ಸಾಧ್ಯತೆಗಳಿದ್ದಂತೆಯೇ ಅವು ಅನೇಕ ಅಪಾಯಗಳನ್ನೂ ಎದುರಿಸಬೇಕಾಗಿತ್ತು. ಬಂಡವಾಳಶಾಹಿಯ ಆರ್ಥಿಕ ಮುಗ್ಗಟ್ಟು ವಿವಿಧ ದೇಶಗಳ ಕಾರ್ಮಿಕರನ್ನು ಹೋರಾಟದ ಮಾರ್ಗವನ್ನವಲಂಭಿಸುವಂತೆ ಪ್ರೇರೇಪಿಸುತ್ತಿತ್ತು. ವಸಾಹತುಗಳಾಗಿದ್ದ ರಾಷ್ಟ್ರಗಳಲ್ಲಿ ಕ್ರಾಂತಿಕಾರಿ ವಿಮೋಚನಾ ಹೋರಾಟಗಳು ನಡೆದವು. ಆದರೆ ಅದೇ ವೇಳೆಗೆ ಫ್ಯಾಸಿಸಂ ತಲೆಯೆತ್ತಿತು. "ಫ್ಯಾಸಿಸಂ"ಸ್ವಾಮ್ಯ ವರ್ಗದ ಭಯೋತ್ಪಾದಕ ಸಾರ್ವಾಧಿಕಾರಿ ಪ್ರವೃತ್ತಿಯ ಪ್ರತೀಕವೆಂದು ಸ್ಟಾಲಿನ್ ಅದನ್ನು ವರ್ಣಿಸಿದ್ದಾರೆ ವಿವಿಧ ರಾಷ್ಟ್ರಗಳಲ್ಲಿ ಬೇರೆಬೇರೆ ರೂಪಗಳಲ್ಲಿ ಕಾಣಿಸಿಕೊಂಡ ಈ ಫ್ಯಾಸಿಸ್ಟ್ ಅಪಾಯ ದೇಶಗಳ ಸ್ವಾತಂತ್ರ್ಯ ಹಾಗೂ ಪ್ರಜಾಸತ್ತೆಗೆ ಬೆದರಿಕೆಯೊಡ್ಡಲಾರಂಭಿಸಿತು. ಫ್ಯಾಸಿಸಂ, ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿಗಳ ವಿರುದ್ಧ ಜಗತ್ತಿನಾದ್ಯಂತ ಶಾಂತಿಪ್ರಿಯ, ಸ್ವಾತಂತ್ರ್ಯಪ್ರಿಯ ಜನರನ್ನು ಒಂದುಗೂಡಿಸಲು ಸ್ಟಾಲಿನ್ನರ ನೇತೃತ್ವದಲ್ಲಿ ಸೋವಿಯೆತ್ ಕಮ್ಯುನಿಸ್ಟ್ ಪಕ್ಷದ ಕೇಂದ್ರಸಮಿತಿ ಮತ್ತು ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್‌ನ ಕಾರ್ಯಕಾರಿ ಸಮಿತಿಗಳು ವಿಶ್ವದ ಎಲ್ಲೆಡೆ ನೂರಾರು ಸಾವಿರ ಕಮ್ಯುನಿಸ್ಟರನ್ನು ತರಬೇತುಗೊಳಿಸಿದವು. ಈ ಯುವಕಮ್ಯುನಿಸ್ಟರಿಗೆ ಸ್ಟಾಲಿನ್ನರದೇ ಮಾರ್ಗದರ್ಶನ. ಈ ಅವಧಿಯಲ್ಲಿ ಜಾಗತಿಕ ಕಮ್ಯುನಿಸ್ಟ್ ಚಳುವಳಿಯನ್ನು ಸುಭದ್ರವಾಗಿ ನೆಲೆಗೊಳಿಸಲಾಯಿತು. ಸೋವಿಯೆತ್ ಒಕ್ಕೂಟ ಮತ್ತು ಪ್ರಭುತ್ವಗಳು ಇನ್ನಷ್ಟು ಬಲಶಾಲಿಯಾದವು.

ಕಮ್ಯುನಿಸ್ಟ್ ಸಂಘಟನೆಯನ್ನು ಸುಭದ್ರಗೊಳಿಸಲು ನಡೆದ ಈ ಪ್ರಯತ್ನಗಳಿಂದಾದ ಪ್ರಯೋಜನ ಅಷ್ಟಿಷ್ಟಲ್ಲ. ಇದರಿಂದಾಗಿ ದ್ವಿತೀಯ ವಿಶ್ವಸಮರ ಆರಂಭಗೊಂಡಾಗಅದರ ಪಂಥಾಹ್ವಾನವನ್ನು ಎದುರಿಸಲುಸೋವಿಯೆತ್ ಮತ್ತು ಜಗತ್ತಿನ ಎಲ್ಲ ಕಮ್ಯುನಿಸ್ಟ್ ಪಕ್ಷಗಳೂ ಸರ್ವಸನ್ನದ್ಧವಾಗಿದ್ದವು. ಕಮ್ಯುನಿಸ್ಟ್ ಇಂಟರ್‌ನ್ಯಾಶನಲ್‌ನ ಏಳನೆ ಕಾಂಗ್ರೆಸ್ ಫ್ಯಾಸಿಸಂನ್ನೂ ಎರಡನೇ ಮಹಾಯುದ್ಧವನ್ನೂ ಎದುರಿಸುವಂತೆ ಕರೆನೀಡಿತು. ಜಗತ್ತಿನ ಏಕಮೇವ ಸಮಾಜವಾದಿ ರಾಷ್ಟ್ರವಾಗಿದ್ದ ಸೋವಿಯೆತ್ ಒಕ್ಕೂಟವು ಫ್ಯಾಸಿಸಂಗೆ ವಿರುದ್ಧವಾಗಿದ್ದ ಸಾಮ್ರಾಜ್ಯಶಾಹಿಯ ಒಂದು ವಿಭಾಗದ ಸಹಕಾರವನ್ನೂ ಪಡೆದು ಫ್ಯಾಸಿಸಂನ ಸವಾಲನ್ನು ಸಡ್ಡುಹೊಡೆದು ಸ್ವೀಕರಿಸಿತು. ಇದು ಸೋವಿಯೆತ್ ಕಮ್ಯುನಿಸ್ಟ್ ಪಕ್ಷದ ಪ್ರಶ್ನಾತೀತ ಮುಂದಾಳುವಾಗಿದ್ದ ಸ್ಟಾಲಿನ್ ವಿಶ್ವದ ಕ್ರಾಂತಿಕಾರಿ ಚಳುವಳಿಗೆ ನೀಡಿದ ವಿಶಿಷ್ಟ ಕೊಡುಗೆ.

ಲೆನಿನ್‌ವಾದದ ಪ್ರತಿಪಾದಕ:

ಎರಡನೆಯ ಮಹಾಯುದ್ಧ ಸೋವಿಯೆತ್ ಜನತೆಯ ಪಾಲಿಗೆ ಸಂರಕ್ಷಣಾತ್ಮಕ ಸಮರವಾಗಿದ್ದರೂ ಜಗತ್ತಿನ ಕಾರ್ಮಿಕ ವರ್ಗ ಮತ್ತು ಪ್ರಜಾಸತ್ತಾತ್ಮಕ ಹಾಗೂ ಶಾಂತಿಪ್ರಿಯ ಜನರ ಪಾಲಿಗೆ ಜಾಗತಿಕ ಬಂಡವಾಳಶಾಹಿಯ ಅತ್ಯಂತ ಪ್ರತಿಗಾಮಿ ವಿಭಾಗದ ವಿರುದ್ಧ ಆಕ್ರಮಣಾತ್ಮಕ ಸಮರವಾಗಿ ಪರಿಣಮಿಸಿತು. ಯುದ್ಧದ ಕೊನೆಯಲ್ಲಿ ಜಾಗತಿಕ ಬಂಡವಾಳಶಾಹಿ ತೀವ್ರ ಸೋಲನ್ನು ಅನುಭವಿಸಬೇಕಾಯಿತು. ಇದು ಅಕ್ಟೋಬರ್ ಕ್ರಾಂತಿಯ ನಂತರ ಜಗತ್ತಿನ ಬಂಡವಾಳಶಾಹಿ ಅನುಭವಿಸಿದ

[7ನೇ ಪುಟ ನೋಡಿ]

ಚುನಾವಣಾ ಸ್ವಾರಸ್ಯ

1. ಕಾಂಗ್ರೆಸ್ (ಐ) ಪಕ್ಷದಿಂದ ಮುಂಬರುವ ಲೋಕಸಭೆಗೆ ಸ್ಪರ್ಧಿಸುವ ಸುಮಾರು 500 ಅಭ್ಯರ್ಥಿಗಳಲ್ಲಿ 180 ಮಂದಿ ಸಂಜಯಗಾಂಧಿಯ ನಿಕಟವರ್ತಿಗಳು ಮತ್ತು ಬೆಂಬಲಿಗರು. (ಇಂಡಿಯನ್ ಎಕ್ಸ್‌ಪ್ರೆಸ್. 27.12.79)

2. ಕಾಂಗ್ರೆಸ್ (ಐ) ಪಕ್ಷವು ಈ ಸಲದ ಚುನಾವಣೆಯಲ್ಲಿ ಗೆದ್ದು ಬಹುಮತ ಪಡೆದರೆ, ಇಂದಿರಾಗಾಂಧಿ ತನ್ನ ನಾಯಕತ್ವಸ್ಥಾನವನ್ನು ಬಿಟ್ಟುಕೊಟ್ಟು ಮಗ ಸಂಜಯಗಾಂಧಿಯನ್ನೇ ಪ್ರಧಾನಿ ಪಟ್ಟಕ್ಕೇರಿಸುತ್ತಾಳೆ. ಇದಕ್ಕೆ ಕಾಂಗ್ರೆಸ್ (ಐ) ಪಕ್ಷದ ಲೋಕಸಭಾಸದಸ್ಯರ ವ್ಯಾಪಕ ಬೆಂಬಲ ಸಿಗುವ ನಿರೀಕ್ಷೆ ಇದೆ. (ಇಂಡಿಯನ್ ಎಕ್ಸ್‌ಪ್ರೆಸ್, 27.12.79)

3. ಇಂದಿರಾಗಾಂಧಿ-ಸಂಜಯಗಾಂಧಿ ಕೂಟವು ಲೋಕಸಭಾ ಚುನಾವಣಾ ಖರ್ಚಿಗಾಗಿ ಸ್ವಿಟ್ಸರ್‌ಲ್ಯಾಂಡಿನಲ್ಲಿರುವ ತಮ್ಮ ಬ್ಯಾಂಕು ಖಾತೆಗಳಿಂದ ರೂ 40ಕೋಟಿ ಹಣ ತರಿಸಿದೆ. ಈ ವಿಷಯ ಮೊತ್ತಮೊದಲು ಸ್ವಿಟ್ಸರ್‌ಲ್ಯಾಂಡಿನ ಪಾರ್ಲಿಮೆಂಟಿನಲ್ಲಿ ಕೇಳಿದ ಪ್ರಶ್ನೆ ಒಂದಕ್ಕೆ ಉತ್ತರಿಸುವ ಮೂಲಕ ಹೊರಜಗತ್ತಿಗೆ ತಿಳಿಯಿತು. (ಇಂಡಿಯನ್ ಎಕ್ಸ್‌ಪ್ರೆಸ್ 27.12.79)

4. ಇಂದಿರಾಗಾಂಧಿ-ಸಂಜಯಗಾಂಧಿ ಕೂಟವು ಈ ಸಲದ ಚುನಾವಣೆಗೆ ಕನಿಷ್ಟ ರೂ 60ಕೋಟಿಗಳಷ್ಟು ಹಣ ವಿನಿಯೋಗಿಸುತ್ತಿದೆ. ಪ್ರತಿಯೊಬ್ಬ ಕಾಂಗ್ರೆಸ್ (ಐ) ಅಭ್ಯರ್ಥಿಗೆ ರೂ5ಲಕ್ಷದಿಂದ ರೂ 10ಲಕ್ಷದವರೆಗೆ ಹಣ ಸಹಾಯ ನೀಡಲಾಗಿದೆ. ಸುಮಾರು ಮೂರು ವರ್ಷಗಳಿಂದ ಅಧಿಕಾರದಲ್ಲಿಲ್ಲದ ಕಾಂಗ್ರೆಸ್ (ಐ) ಪಕ್ಷಕ್ಕೆ ಇಷ್ಟೊಂದು ಹಣ ಎಲ್ಲಿಂದ? ಇದಕ್ಕೆ ಸರಿಯಾದ ಉತ್ತರ ಕಾಂಗ್ರೆಸ್ (ಐ) ಕೊಟ್ಟರೆ ತಾನು ರಾಜಕೀಯ ಸನ್ಯಾಸ ಸ್ವೀಕರಿಸುವುದಾಗಿ ಚರಣಸಿಂಗ್ ಸವಾಲು ಹಾಕಿದ್ದಾರೆ. ಸ್ವಿಟ್ಸರ್‌ಲ್ಯಾಂಡಿನಲ್ಲಿ ಇಂದಿರಾ-ಸಂಜಯ ಕೂಟದ ಬ್ಯಾಂಕ್ ಠೇವಣಿಯ ಕುರಿತು ಅಲ್ಲಿನ ಸರಕಾರದಿಂದ ಹೆಚ್ಚಿನ ಮಾಹಿತಿ ಪಡೆಯುವುದಾಗಿಯೂ ಚರಣಸಿಂಗ್ ತಿಳಿಸಿದ್ದಾರೆ. (ಉದಯವಾಣಿ 31.12.79)

5. ಕಾಂಗ್ರೆಸ್ (ಐ) ಪಕ್ಷದ ಅಭ್ಯರ್ಥಿಗಳಲ್ಲಿ ಸುಮಾರು 60ಜನರನ್ನು ಮುಂಬರುವ ಚುನಾವಣೆಯಲ್ಲಿ ಬಿರ್ಲಾ ಕೈಗಾರಿಕಾ ಕುಟುಂಬ ಒಂದೇ ಧನಸಹಾಯವಿತ್ತು ಬೆಂಬಲಿಸುವುದು ಯಾಕೆ? ಕಾಂಗ್ರೆಸ್ (ಐ) ಅಧಿಕಾರಕ್ಕೆ ಬಂದರೆ ಕಾರ್ಮಿಕರಿಗೆ, ನೌಕರರಿಗೆ ವೇತನಸ್ಥಗಿತಗೊಳಿಸುವುದು, ತುಟ್ಟಿಭತ್ಯೆ, ಬೋನಸ್ ಕಡಿತಗೊಳಿಸುವುದು, ಲಾಕ್ ಔಟ್ ಮಾಡಲು ಬಿಡುವುದು, ಮುಷ್ಕರನಿಷೇಧಿಸುವುದು, ಕಾರ್ಮಿಕರನ್ನು ಕೆಲಸದಿಂದ ತೆಗೆದುಹಾಕಲು ಸಮ್ಮತಿಸುವುದು. ಬಿರ್ಲಾರ ಬೊಕ್ಕಸ ಇದರಿಂದ ತುಂಬುವುದು. (ಕಾಂ. ಪಿ.ರಾಮಚಂದ್ರರಾವ್ ಉಡುಪಿ, ಕುಂದಾಪುರದಲ್ಲಿ ತಾ.26,27 ಡಿಸೆಂಬರ್, 1979).

6. ಟಾಟಾ, ಬಿರ್ಲಾ, ಮುಂತಾದ ಗುತ್ತೇದಾರಿ ಕೈಗಾರಿಕಾ ಕುಟುಂಬಗಳು ಇಂದಿರಾಗಾಂಧಿ ಮತ್ತು ಜಗಜೀವನರಾಂ ಇವರೊಳಗೆ ಚುನಾವಣಾ ಸಖ್ಯ ಬೆಳೆಸಲು, ಸ್ಥಿರ ಸರಕಾರ ರಚಿಸಲು ರೂ. 30ಕೋಟಿಯ ಆಮಿಷ ತೋರಿಸುವ ಒಳ ಸಂಚು ನಡೆಸಿವೆ. ಚುನಾವಣೆಯ ನಂತರವೂ ಇಂತಹ ಪ್ರಯತ್ನಗಳು ಮುಂದುವರಿಯುವುವು (ಸಂಡೇ 16-12-79)

7. ಸಕ್ಕರೆ ಕಾರ್ಖಾನೆಯವರು, ಚಿನ್ನ ಬೆಳ್ಳಿ ವ್ಯಾಪಾರಿಗಳು ಕಾಂಗ್ರೆಸ್ (ಐ) ಮತ್ತು ಜನತಾಪಕ್ಷಗಳಿಗೆ ಚುನಾವಣೆಗಾಗಿ ಕೋಟಿಗಟ್ಟಲೆ ರೂಪಾಯಿ ಧನಸಹಾಯ ಮಾಡಲು ಮುಂದಾಗಿದ್ದಾರೆ (ಬ್ಲಿಟ್ಸ್ : 29-12-79)

8. 1977ರ ಚುನಾವಣೆಯಲ್ಲಿ ಇಂದಿರಾಗಾಂಧಿ ವಿಮಾನ ಸಾರಿಗೆ ಬಳಸಿಕೊಂಡು ಬಾಡಿಗೆ ಬಾಕಿ ಮಾಡಿಕೊಂಡಿರುವುದರಿಂದ, ಕೇಂದ್ರ ಸರಕಾರ ದೆಹಲಿ ಹೈಕೋರ್ಟಿನಲ್ಲಿ ರೂ. 15.66 ಲಕ್ಷ (ಬಡ್ಡಿ ಸೇರಿ) ವಸೂಲಿ ಮಾಡಲು ದಾವೆ ಹೂಡಿದೆ. (ಉದಯವಾಣಿ : 23-12-79)

ಈ ಸಲದ ಚುನಾವಣಾ ಪ್ರಚಾರಕ್ಕಾಗಿ ಒಂದು ವಿಮಾನವನ್ನೇ ಖರೀದಿಸಲು ಆಗಸ್ಟ್ ತಿಂಗಳಲ್ಲಿ ಸಂಜಯಗಾಂಧಿ ಸ್ವತಃ ರೊಖ್ಖ ಹಣ ಹಿಡಿದುಕೊಂಡು ಮುಂಬಯಿಗೆ ಬಂದಿದ್ದರೂ ಉಪಯೋಗವಾಗಲಿಲ್ಲ. ತುರ್ತುಪರಿಸ್ಥಿತಿಯಲ್ಲಿ ಅಮೇರಿಕದ ಪೈಪರ್ ವಿಮಾನ ಕಂಪೆನಿಯ ಏಜೆಂಟಾಗಿ ಕೆಲಸ ಮಾಡುತ್ತಿದ್ದ ಸಂಜಯಗಾಂಧಿಯ ಮಾರುತಿ ಟೆಕ್ನಿಕಲ್ ಸರ್ವಿಸಸ್ ಸಂಸ್ಥೆಯ ಅಧಿಕಾರಿಯೊಬ್ಬ ಅಕ್ಟೋಬರ್‌ನಲ್ಲಿ ಪುನಃ ಮುಂಬಯಿಗೆ ಬಂದು ವಿಮಾನ ಒಂದನ್ನು ಖರೀದಿಸಲು ಪ್ರಯತ್ನಿಸಿದನು. ಅದು ಫಲಕಾರಿಯಾಗಲಿಲ್ಲ. ಕೊನೆಗೆ ಆರು ಜನರು ಕುಳಿತುಕೊಳ್ಳಬಹುದಾದ ವಿಸ್ಕೌಂಟ್ ವಿಮಾನ ಒಂದನ್ನು ಮೂರು ಹೆಲಿಕಾಪ್ಟರ್‌ಗಳನ್ನೂ ಮುಂಬಯಿಯ ಹಾನ್ಸ್ ಖಾಸಗೀ ವಿಮಾನ ಸಾರಿಗೆ ಸಂಸ್ಥೆಯಿಂದ ಬಾಡಿಗೆಗೆ ಪಡೆಯಲಾಯಿತು. ವಿಮಾನ ಓಡಾಟಕ್ಕೆ ಬೇಕಾದ ಇಂಧನ ತೈಲಗಳು ತೀರಾ ಅಭಾವ ಇರುವ ಈ ದುಃಸ್ಥಿತಿಯ ಕಾಲದಲ್ಲಿ ಇಂದಿರಾಗಾಂಧಿಯು ಬಾಡಿಗೆಗೆ ಪಡೆದ ವಿಮಾನಗಳು ಹೇಗೆ ಅಗತ್ಯದ ತೈಲಗಳನ್ನು ಪಡೆಯುವುವು? (ಇಂಡಿಯನ್ ಎಕ್ಸ್‌ಪ್ರೆಸ್: 29-12-79)

9. ವಿಸ್ಕೌಂಟ್ ವಿಮಾನ ಒಂದರ ಒಂದು ಘಂಟೆಯ ಹಾರಾಟದ ಬಾಡಿಗೆ ರೂ. 10,000. ಇನ್ನು ಹಾರಾಟಕ್ಕೆ ಬೇಕಾದ ಇಂಧನ, ನಿಲ್ಲಲು ನಿಲ್ದಾಣ, ಇತ್ಯಾದಿ ಖರ್ಚುಗಳು ಪ್ರತ್ಯೇಕ. ಒಂದು ಹೆಲಿಕಾಪ್ಟರ್ ಒಂದು ಘಂಟೆ ಹಾರಲು ಬಾಡಿಗೆ ರೂ. 2600; ಅದರ ಹಾರಾಟಕ್ಕೆ ಬೇಕಾದ ಇಂಧನ, ನಿಲ್ಲಲು ನಿಲ್ದಾಣ, ಇತ್ಯಾದಿ ಖರ್ಚುಗಳು ಪ್ರತ್ಯೇಕ. ಒಂದು ವಿಸ್ಕೌಂಟ್ ವಿಮಾನ ಮೂರು ಹೆಲಿಕಾಪ್ಟರ್ ಇವುಗಳನ್ನು ಒಂದು ತಿಂಗಳ ಅವಧಿಗೆ ಚುನಾವಣಾ ಪ್ರಚಾರಕ್ಕಾಗಿ ಇಂದಿರಾಗಾಂಧಿ ಪಡೆದಿರುವಳು. ಇವೆಲ್ಲದರ ಒಟ್ಟು ಖರ್ಚು ಕಡಿಮೆ ಎಂದರೆ ರೂ. 50 ಲಕ್ಷವಾದರೂ ಆದೀತು. ಈ ಖರ್ಚಿನಲ್ಲಿ ಇಂದಿರಾಗಾಂಧಿ ಎಷ್ಟು ಕೊಡುವುದು; ಕಾಂಗ್ರೆಸ್ (ಐ) ಪಕ್ಷ ಎಷ್ಟು ಕೊಡುವುದು, ವಿಮಾನಗಳನ್ನು ಬಾಡಿಗೆಗೆ ಕೊಟ್ಟ ಹಾನ್ಸ್ ಸಂಸ್ಥೆ ಎಷ್ಟು ಪುಕ್ಕಟ್ಟೆಯಾಗಿ ಕೊಡುವುದು? ಇದಾವುದೂ ತಿಳಿಯದು. ಹಾನ್ಸ್ ಸಂಸ್ಥೆಗೆ ಇದರಿಂದೇನು ಲಾಭ? ಚುನಾವಣೆ ಮುಗಿದು ಇಂದಿರಾಗಾಂಧಿ ಅಧಿಕಾರಕ್ಕೆ ಬಂದರೆ ಈ ಸಂಸ್ಥೆಗೆ ಇನ್ನಷ್ಟು ಕೆಲವು ಪ್ರಮುಖ ಮಾರ್ಗಗಳಲ್ಲಿ ಖಾಸಗೀ ವಿಮಾನ ಸಾರಿಗೆ ನಡೆಸಲು ಅನುಮತಿ ಸಿಕ್ಕೀತು! (ಇಂಡಿಯನ್ ಎಕ್ಸ್‌ಪ್ರೆಸ್ : 28-12-79)

10. ಇಂದಿರಾಗಾಂಧಿ ತಾನು ಸಂದರ್ಶಿಸುವ ಸ್ಥಳಗಳಲ್ಲಿ 10-15 ನಿಮಿಷಗಳಷ್ಟೇ ಕಾಲ ತನ್ನ ದರ್ಶನ ಮಾತ್ರ ಜನರಿಗೆ ಕೊಡುವಳೇ ಹೊರತು ತನ ಪಕ್ಷದ ಧ್ಯೇಯ ಧೋರಣೆಗಳನ್ನು ಹೇಳುವುದಿಲ್ಲ. ಎಲ್ಲಾ ಪಕ್ಷಗಳನ್ನು ದೂರಿ ತಾನೊಬ್ಬಳೇ ಸ್ಥಿರ ಸರಕಾರ ಕೊಡಬಲ್ಲೆ ಎಂಬುದೊಂದೇ ಆಕೆಯ ಪದ. ಅವಳ ದರ್ಶನಕ್ಕಾಗಿ ಹಳ್ಳಿಯ ಬಡಪಾಯಿಗಳನ್ನು ಲಾರಿಗಳಲ್ಲಿ ತುಂಬಿಸಿ ತರಲಾಗುತ್ತಿದೆ. ವೇದಿಕೆಯಲ್ಲಿ ಅವಳ ಜೊತೆ ಯಾರು ಕುಳಿತುಕೊಳ್ಳುವುದು ಎಂಬ ಕಾರಣಕ್ಕಾಗಿಯೇ ಅವಳ ಪಕ್ಷದ ಪುಢಾರಿಗಳಲ್ಲಿ ಹೊಯಿಕೈ ಆಗಿ ಪೋಲೀಸರೂ ಮಧ್ಯಪ್ರವೇಶಿಸಬೇಕಾಗುತ್ತಿತ್ತು. ಶಿಸ್ತು ಪಾಲಿಸಲು! (ಇಂಡಿಯನ್ ಎಕ್ಸ್‌ಪ್ರೆಸ್ : 31-12-79)

11. ಮಂಗಳೂರು ಲೋಕಸಭಾ ಚುನಾವಣೆ, ಸುಳ್ಯ ತಾಲ್ಲೂಕಿಗೆ K. R. S. ಇನಿಷಿಯಲ್ ಉಳ್ಳ ಜೀಪ್‌ವೊಂದು ಬಂದಿತ್ತು. ಜೀಪಿನ ನಂಬರ್ ಪ್ಲೇಟನ್ನು ಕಂಡ ಅನೇಕರು ಕುತೂಹಲದಿಂದ ತುಳುವಿನಲ್ಲಿ ಡ್ರೈವರ್‌ನನ್ನು ಕೇಳಿದರು "ನಿಮ್ಮದು ಯಾವ ಊರು?" ಡ್ರೈವರಪ್ಪ ಮಾತಾಡಲಿಲ್ಲ, ಕನ್ನಡದಲ್ಲಿ ಕೇಳಿದರು ಅದಕ್ಕೂ ಉತ್ತರವಿಲ್ಲ. ಮಲಯಾಳ, ತಮಿಳು ಎಲ್ಲಾ ಆದಮೇಲೆ ಕೊನೆಗೆ ಸಿ. ಪಿ. ಐ. (ಎಂ) ಮುಖಂಡ ಸೂರ್ಯನಾರಾಯಣ ಭಟ್ಟರು ಹಿಂದಿಯಲ್ಲಿ ಕೇಳಿದರು. "ಆಪ್ ಕಿಧರ್‌ಸೆ ಆಯಾ" (ನೀವು ಎಲ್ಲಿಂದ ಬಂದದ್ದು?) ಕೂಡಲೇ ಡ್ರೈವರ್ ಉತ್ತರಿಸಿದ "ಹಂ ಗಂಗಾನಗರ್ ಸೆ ಆಯಾ" (ನಾನು ಗಂಗಾನಗರದಿಂದ ಬಂದದ್ದು). ಇಂದಿರಾ ಕಾಂಗ್ರೆಸ್ಸಿನ ಪರ ಚುನಾವಣಾ ಪ್ರಚಾರಕ್ಕೆಂದು ಆ ಜೀಪು ರಾಜಾಸ್ತಾನದ ಗಂಗಾನಗರದಿಂದ ಬಂದಿತ್ತು. ಇಂತಹ ಎರಡು ನೂರು ಜೀಪುಗಳನ್ನು, ಕರ್ನಾಟಕಕ್ಕೆ ಬಡವರ ಪಕ್ಷಪಾತಿ ಶ್ರೀಮತಿ ಇಂದಿರಾಗಾಂಧಿಯವರಿಗೆ ಶ್ರೀಮಾನ್ ಬಿರ್ಲಾ ಕಳಿಸಿದ್ದರು.

12. ಉತ್ತರ ಭಾರತದಲ್ಲಿ ಪಕ್ಷೇತರ ಅಭ್ಯರ್ಥಿಗಳ ಸಂಖ್ಯೆ ಕಳೆದಬಾರಿಗಿಂತ ಹೆಚ್ಚಾಗಿದೆ. ಇದಕ್ಕೆ ಕಾರಣ, ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಸಿಗುವ ಪೆಟ್ರೋಲ್, ಡೀಸೆಲ್‌ಗಳ ವಿಶೇಷ ಕೋಟಾ. ಚುನಾವಣೆಯಲ್ಲಿ ಠೇವಣಿ ಹೋದರೂ, ಪೆಟ್ರೋಲ್, ಡೀಸೆಲ್‌ಗಳನ್ನು ಮಾರಿ ಲಾಭ ಸಂಪಾದಿಸುವ ಬುದ್ಧಿ ಈ ಪಕ್ಷೇತರರದು. ಮಧ್ಯಂತರ ಚುನಾವಣೆಗೆ ಬಹುಶಃ ಮನಸ್ಸಿನಲ್ಲೇ ಜನ ವಂದಿಸುತ್ತಿರಬಹುದು. (ಬ್ಲಿಟ್ಸ್: 29-12-79).

○

ತುಮಕೂರಿನಲ್ಲಿ ಯಶಸ್ವಿ ಬಂಡಾಯ ಸಾಹಿತ್ಯ ಸಮ್ಮೇಳನ

ದಿನಾಂಕ 15.12.79ರಂದು ಜಿಲ್ಲಾ ಬಂಡಾಯ ಸಾಹಿತ್ಯ ಸಮ್ಮೇಳನ ಜರುಗಿತು. ಈ ಸಮ್ಮೇಳನದ ಉದ್ಘಾಟನೆಯನ್ನು ಡಿ.ಆರ್. ನಾಗರಾಜ್ ನೆರವೇರಿಸಿದರು. ಸಮ್ಮೇಳನದ ಚರ್ಚಾಗೋಷ್ಠಿಯಲ್ಲಿ ಬಾಪೂ ಹೆದ್ದೂರಶೆಟ್ಟಿ, ಬರಗೂರು ರಾಮಚಂದ್ರಪ್ಪ, ದಲಿತ ಕವಿ ಸಿದ್ದಲಿಂಗಯ್ಯ, ಕೆ.ಬಿ ಸಿದ್ದಯ್ಯ ಮತ್ತು ಕೆ.ಎಂ. ಶಂಕರಪ್ಪನವರು ಬೇರೆ ಬೇರೆ ಪ್ರಬಂಧಗಳನ್ನು ಮಂಡಿಸಿದರು. ಕೆ.ಜಿ. ನಾಗರಾಜಪ್ಪ ಅಧ್ಯಕ್ಷತೆ ವಹಿಸಿದ್ದರು.

ಮಧ್ಯಾಹ್ನದ ಕವಿಗೋಷ್ಠಿಯನ್ನು ಕಾಳೇಗೌಡನಾಗವಾರ ಅವರು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ವಿ.ಚಿಕ್ಕವೀರಯ್ಯನವರು ವಹಿಸಿದ್ದರು. ಸಮ್ಮೇಳನದ ಸಮಾರೋಪ ಭಾಷಣವನ್ನು ಹೆಚ್ ಜಿ. ಸಣ್ಣಗುಡ್ಡಯ್ಯನವರು ನೀಡಿದರು. ಸಂಜೆ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸಮುದಾಯ ಕಲಾವಿದರು "ಬೆಲ್ಚಿ" ಎಂಬ ನಾಟಕ ಅಭಿನಯಿಸಿದರು. ದಲಿತ ಸಂಘರ್ಷ ಸಮಿತಿಯ ಕಲಾವಿದರು ಬಂಡಾಯ ಗೀತೆಗಳನ್ನು ಹಾಡಿದರು.

ನಿರ್ಣಯಗಳು :

ತುಮಕೂರಿನ ಜಿಲ್ಲಾ ಬಂಡಾಯ ಸಾಹಿತ್ಯ ಸಮ್ಮೇಳನ ಮೈಕೋ ಕಾರ್ಮಿಕರ ಹಾಗೂ ತಾತಗುಣಿ ಎಸ್ಟೇಟ್ ಕಾರ್ಮಿಕರ ಹೋರಾಟಕ್ಕೆ ಬೆಂಬಲ ನೀಡುತ್ತದೆ.

ದಿನಾಂಕ 15.12.79ರಂದು ನಡೆದ ಜಿಲ್ಲಾ ಬಂಡಾಯ ಸಾಹಿತ್ಯ ಸಮ್ಮೇಳನ ಮೈಕೋ ಕಾರ್ಮಿಕರ ಹೋರಾಟಕ್ಕೆ ಹಾಗೂ ತಾತಗುಣಿ ಎಸ್ಟೇಟ್ ಕಾರ್ಮಿಕರ ನ್ಯಾಯಯುತ ಹೋರಾಟಕ್ಕೆ ಬೆಂಬಲ ನೀಡಬೇಕೆಂದು ನಿರ್ಣಯಿಸಿತು. ಇದೇ ಸಮಯದಲ್ಲಿ ಮರಾಠವಾಡ ವಿಶ್ವವಿದ್ಯಾನಿಲಯಕ್ಕೆ ಅಂಬೇಡ್ಕರ್ ಹೆಸರಿಡಬೇಕೆಂದು ಹಾಗೂ ತಗಡೂರಿನ ದಲಿತ ಸಂಘರ್ಷ ಸಮಿತಿಯ ಹೋರಾಟಕ್ಕೆ ಬೆಂಬಲ ನೀಡಲು ನಿರ್ಣಯಿಸಿತು.

●

ಕಾಂಗ್ರೆಸ್ (ಯು) ವಿಫಲತೆ

ತುಮಕೂರು ಲೋಕಸಭಾ ಮತ್ತು ವಿಧಾನಸಭಾ ಕ್ಷೇತ್ರಗಳಿಗೆ ನಡೆದ ಚುನಾವಣೆಯಲ್ಲಿ ಸರ್ವಾಧಿಕಾರಿ ಮತ್ತು ಕೋಮುವಾದಿ ಶಕ್ತಿಗಳನ್ನು ವಿರೋಧಿಸಿ ಹೋರಾಡುವ ಎಲ್ಲಾ ಪ್ರಗತಿಪರ ಶಕ್ತಿಗಳನ್ನು ಒಂದುಗೂಡಿಸುವುದರಲ್ಲಿ ಕಾಂಗ್ರೆಸ್ (ಯು) ವಹಿಸಬೇಕಾದಷ್ಟು ಕರ್ತವ್ಯವನ್ನು ವಹಿಸದೆ ವಿಫಲವಾಗಿದೆ ಎಂದು ವಿಷಾದದಿಂದ ತಿಳಿಸಬೇಕಾಗಿದೆ.

ಮುಂದಾದರೂ ಈ ದುಷ್ಟಶಕ್ತಿಗಳ ವಿರುದ್ಧ ಹೋರಾಟ ನಡೆಸುವಲ್ಲಿ ಜಿಲ್ಲೆಯ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಪರಿಣಾಮಕಾರಿ ಐಕ್ಯಹೋರಾಟವನ್ನು ನಡೆಸಬೇಕೆಂದು ತುಮಕೂರು ಜಿಲ್ಲಾ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಕರೆ ನೀಡಿದೆ.

○

ಕೇರಳದಲ್ಲಿ ರಾಜಕೀಯ ಶಕ್ತಿಗಳ ಮರು ಹೊಂದಾಣಿಕೆ

ಕೇರಳದಲ್ಲಿ ಇತ್ತೀಚೆಗೆ ನಡೆದ ಕೆಲವು ರಾಜಕೀಯ ವಿದ್ಯಮಾನಗಳು ಪ್ರಜಾಸತ್ತೆಯಲ್ಲಿ ವಿಶ್ವಾಸವಿರುವ ಎಲ್ಲರ ಗಮನವನ್ನೂ ಸೆಳೆದಿದೆ.

ಬರಲಿರುವ ಲೋಕಸಭಾ ಚುನಾವಣೆಗಳಲ್ಲಿ ಸ್ಪರ್ಧಿಸುವ ಉದ್ದೇಶದಿಂದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳ ಒಕ್ಕೂಟವೊಂದು ಸಿದ್ಧವಾಗಿದೆ. ಈ ಒಕ್ಕೂಟದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವಲ್ಲದೆ, ಭಾರತ ಕಮ್ಯುನಿಸ್ಟ್ ಪಕ್ಷ, ಕ್ರಾಂತಿಕಾರಿ ಸಮಾಜವಾದಿ ಪಕ್ಷ ಮುಂತಾದ ವಾಮಪಕ್ಷಗಳೂ, ಮಿತ್ರಪಕ್ಷಗಳಾದ ಕಾಂಗ್ರೆಸ್ ಮಾಣಿ ಮತ್ತು ಪಿಳ್ಳೆ ಗುಂಪಿನ ಕೇರಳ ಕಾಂಗ್ರೆಸ್‌ಗಳು, ಅಖಿಲ ಭಾರತ ಮುಸ್ಲಿಂ ಲೀಗ್ ಮುಂತಾದ ಪಕ್ಷಗಳೂ ಸೇರಿಕೊಂಡಿವೆ. ಇದಕ್ಕೆ ವಿರುದ್ಧವಾಗಿ ಇಂದಿರಾ ಕಾಂಗ್ರೆಸ್ ನೇತೃತ್ವದಲ್ಲಿ ಪ್ರತಿಗಾಮಿಗಳ ಗುಂಪೊಂದು ಸಜ್ಜಾಗಿದೆ. ಈ ಗುಂಪಿನಲ್ಲಿ ಜನತಾ, ಇಂಡಿಯನ್ ಯೂನಿಯನ್ ಮುಸ್ಲಿಂಲೀಗ್, ಜಾಸೆಫ್ ನೇತೃತ್ವದ ಕೇರಳ ಕಾಂಗ್ರೆಸ್, ಪ್ರಜಾ ಸೋಷಲಿಸ್ಟ್ ಪಕ್ಷ, ನಾಯರ್ ಸರ್ವಿಸ್ ಸೊಸೈಟಿಯ ರಾಜಕೀಯ ಪಕ್ಷವಾದ ಎಸ್. ಎನ್. ಡಿ. ಪಿ. ಮೊದಲಾದ ಪಕ್ಷಗಳಿವೆ. ಪಕ್ಷಗಳ ಈ ಮರು ಹೊಂದಾಣಿಕೆಗೆ ಕೋಯಾ ಮಂತ್ರಿಮಂಡಲದ ರಾಜೀನಾಮೆಯೇ ನಾಂದಿಯಾಯಿತು. ಆದರೆ ಈ ರಾಜೀನಾಮೆ ವಾರದ ಹಿಂದೆಯೇ ಬಂದಿದ್ದರೆ ಲೋಕಸಭಾ ಚುನಾವಣೆಯೊಂದಿಗೇ ರಾಜ್ಯ ವಿಧಾನ ಸಭೆಗೂ ಚುನಾವಣೆಗಳು ನಡೆದು ಹೊಸ ಸರಕಾರವೊಂದು ಅಸ್ತಿತ್ವಕ್ಕೆ ಬರಬಹುದಿತ್ತು. ಇದು ಸಾಧ್ಯವಾಗದೇ ಹೋದುದು ಎಲ್ಲಾ ಪ್ರಜಾಸತ್ತಾತ್ಮಕ, ಜಾತ್ಯಾತೀತ ಮತ್ತು ಮೂಲಭೂತ ಬದಲಾವಣೆಗಳನ್ನು ಬಯಸುವ ಶಕ್ತಿಗಳಿಗೂ ನಿರಾಶೆಯುಂಟುಮಾಡಿದೆಯಾದರೂ ಜನವರಿ 21ರಂದು ರಾಜ್ಯ ವಿಧಾನ ಸಭೆಗೆ ನಡೆಯಲಿರುವ ಚುನಾವಣೆಗಳ ತನಕವೂ ಈ ಒಕ್ಕೂಟವು ಮುಂದುವರಿಯುವುದೆಂಬ ಭರವಸೆಯಿದೆ. ಮುಸ್ಲಿಂಲೀಗಿನ ನಾಯಕನನ್ನು ಮುಖ್ಯಮಂತ್ರಿಯಾಗಿ ಆಯ್ಕೆ ಮಾಡುವುದರ ಹಿನ್ನೆಲೆಯಲ್ಲಿ ಇಂದಿರಾ ಕಾಂಗ್ರೆಸ್, ಜನತಾ, ಮುಸ್ಲಿಂಲೀಗ್ ಮತ್ತು ಅವುಗಳ ಇತರ ಮಿತ್ರಪಕ್ಷಗಳಿಗೆ ಈ ಹೊಸ ಒಕ್ಕೂಟವನ್ನು ತಡೆಯುವ ಉದ್ದೇಶವಿತ್ತೆಂಬುದು ಸ್ಪಷ್ಟ.

ವಾಸುದೇವನ್ ನಾಯರ್ ಮಂತ್ರಿಮಂಡಲದ ರಾಜೀನಾಮೆಯೊಂದಿಗೇ ವಿಧಾನ ಸಭೆಯನ್ನು ವಿಸರ್ಜಿಸಿ, ಚುನಾವಣೆಗಳನ್ನು ನಡೆಸುವ ಸಾಧ್ಯತೆಯಿತ್ತಲ್ಲದೆ, ಅದು ಪ್ರಜಾಸತ್ತಾತ್ಮಕ, ಜಾತ್ಯಾತೀತ ಮತ್ತು ಮೂಲಭೂತ ಬದಲಾವಣೆಗಳನ್ನು ಬಯಸುವ ಎಲ್ಲಾ ಶಕ್ತಿಗಳನ್ನೂ ಹತ್ತಿರ ತರಲು ನಾಂದಿಯಾಗಬಹುದಿತ್ತು. ಕೋಯಾ ಸರಕಾರವನ್ನು ರಚಿಸಲು ಇಂದಿರಾ ಕಾಂಗ್ರೆಸ್ ಹೂಡಿದ ಸಂಚು ಈ ಬೆಳವಣಿಗೆಯನ್ನು ತಡೆಯುವ ಉದ್ದೇಶದಿಂದಲೇ ಎಂಬುದು ಸ್ಪಷ್ಟ.

140 ಸದಸ್ಯರನ್ನು ಹೊಂದಿದ್ದ ರಾಜ್ಯ ವಿಧಾನ ಸಭೆಯಲ್ಲಿ ಕೇವಲ 15 ಮಂದಿ ಸದಸ್ಯರ ಬೆಂಬಲ ಪಡೆದಿದ್ದ ಈ ಮಂತ್ರಿಮಂಡಲದ ಆಂತರಿಕ ವೈರುಧ್ಯಗಳು ಸ್ಪಷ್ಟವಾಗಿದ್ದವು. ಪರಸ್ಪರ ವಿರೋಧಿಗಳಾದ ಕಾಂಗ್ರೆಸ್, ಇಂದಿರಾ ಕಾಂಗ್ರೆಸ್, ಕೇರಳ ಕಾಂಗ್ರೆಸ್ಸಿನ ಎರಡು ಬಣಗಳು, ಮತ್ತು ಜನತಾಪಕ್ಷ ಈ ಮಂತ್ರಿಮಂಡಲಕ್ಕೆ, ಬೆಂಬಲ ನೀಡಿದ್ದುವು. ಈ ಪಕ್ಷಗಳ ಪೈಕಿ ಯಾವೊಂದು ಪಕ್ಷವೂ ಸಂಪುಟಕ್ಕೆ ಸೇರಿದ್ದರೆ ಇನ್ನೊಂದು ಪಕ್ಷ ಈ ರಂಗದಿಂದ ಹೊರಗೆ ಬರುವ ಪರಿಸ್ಥಿತಿಯಿತ್ತು. ಇದನ್ನು ನಿವಾರಿಸಲೆಂದೇ ಎಲ್ಲಾ ಪಕ್ಷಗಳೂ ಹೊರಗಿನಿಂದಲೇ ಬೆಂಬಲ ನೀಡುವ ಸೂತ್ರವನ್ನು ಅನುಸರಿಸಿದುವು.

ಇದು 1954-55ರಲ್ಲಿ ತಿರುವಾಂಕೂರು-ಕೊಚ್ಚಿಯ ಪಟ್ಟಂಥಾನುಪಿಳ್ಳೆ ಸರಕಾರವನ್ನು ನೆನಪಿಸಿಕೊಡುತ್ತಿತ್ತು. 117 ಮಂದಿಯ ರಾಜ್ಯ ವಿಧಾನ ಸಭೆಯಲ್ಲಿ, ಅಂದಿನ ಪಿ. ಎಸ್. ಪಿ. ಮುಖ್ಯಮಂತ್ರಿ ಶ್ರೀ ಪಿಳ್ಳೆಯವರಿಗೆ 19 ಮಂದಿಯ ಬೆಂಬಲವಿದ್ದು, ಅವರು ಹೊರಗಿನಿಂದ ವಿಭಜನಾಪೂರ್ವ ಕಾಂಗ್ರೆಸ್ಸಿನ ಪೂರ್ಣ ಬೆಂಬಲವನ್ನೂ ಪಡೆದಿದ್ದರು. ಕೋಯಾ ಸಂಪುಟದ ಪರಿಸ್ಥಿತಿ ಅದಕ್ಕಿಂತಲೂ ನಿಕೃಷ್ಟ. ಪರಸ್ಪರ ಕಚ್ಚಾಡುವ ಅರ್ಧ ಡಜನ್ ಪಕ್ಷಗಳ ಬೆಂಬಲ ಅವರಿಗಿತ್ತು. ಪಟ್ಟಂ ಸರಕಾರದಲ್ಲಿ 19 ಮಂದಿಯಿದ್ದರೆ, ಕೋಯಾ ಸಂಪುಟದಲ್ಲಿ ಕೇವಲ 15 ಮಂದಿಯಿದ್ದು ಅದು ಇನ್ನೂ ದುರ್ಬಲವಾಗಿತ್ತು.

ರೈತ ವಿರೋಧಿ ಇನಾಂ ಜಮೀನು ದಾಖಲಾತಿಗಳ ಮಸೂದೆಯನ್ನು ಪಾಸು ಮಾಡುವುದೇ ಈ ಸರಕಾರದ ಘೋಷಿತ ಉದ್ದೇಶವಾಗಿತ್ತು. ಇದು ಕೇವಲ ಒಂದು ನೆಪವೆಂಬುದು ಆ ಮೇಲಿನ ವಿದ್ಯಮಾನಗಳಿಂದ ಸ್ಪಷ್ಟವಾಯಿತು. ಈ ಮಸೂದೆ ಮಂಜೂರಾದ ಮೇಲೂ ಈ ಒಕ್ಕೂಟ ಮುಂದುವರಿಯಿತಲ್ಲದೆ, ಲೋಕಸಭಾ ಚುನಾವಣೆಗಳವರೆಗೂ ಎಡಪಕ್ಷಗಳನ್ನು ವಿರೋಧಿಸುವ ಸಂಯುಕ್ತರಂಗವನ್ನಾಗಿ ಇದನ್ನೇ ಬಲಪಡಿಸುವ ಪ್ರಯತ್ನಗಳೂ ನಡೆದುವು. ಆದರೆ, ಇಂದಿರಾ ಕಾಂಗ್ರೆಸ್ಸಿನ ಈ ತಂತ್ರ ಸೋಲುವುದಕ್ಕೆ ಮಾಣಿ ಗುಂಪಿನ ಕೇರಳ ಕಾಂಗ್ರೆಸ್ ವಹಿಸಿದ ಪಾತ್ರವಂತೂ ನಿಜಕ್ಕೂ ಪ್ರಶಂಸಾರ್ಹ. ಪಕ್ಷಾಧ್ಯಕ್ಷ ವಿ. ಟಿ. ಸೆಬಾಸ್ಟಿನ್ ಮತ್ತು ಪಕ್ಷದ ವಿಧಾನ ಸಭಾ ನಾಯಕ ಕೆ. ಎಂ. ಮಾಣಿಯವರು ಎಡಪಕ್ಷಗಳೂ ಸೇರಿದಂತೆ, ಅಖಿಲ ಭಾರತ ಮುಸ್ಲಿಂಲೀಗ್ ಮತ್ತು ಪಿಳ್ಳೆ ಕೇರಳ ಕಾಂಗ್ರೆಸ್ ಇತ್ಯಾದಿ ಪಕ್ಷಗಳೊಂದಿಗೆ ಮಾತುಕತೆ ನಡೆಸಿದರು. ಇದರ ಫಲವಾಗಿ ಲೋಕಸಭಾ ಚುನಾವಣೆಗಳನ್ನು ಜೊತೆಯಾಗಿ ಎದುರಿಸುವ ಮತ್ತು ಬದಲಿ ಸರಕಾರವನ್ನು ರಚಿಸುವ ಒಪ್ಪಂದವಾಯಿತು.

ಈ ಪಕ್ಷಗಳು ತಮ್ಮ ಬೆಂಬಲವನ್ನು ಹಿಂದೆಗೆದ ಕೂಡಲೇ ಕೋಯಾ ಸಂಪುಟಕ್ಕೆ ಅದುವರೆಗಿದ್ದ ಬಹುಮತವು ಸಂದೇಹಕ್ಕೊಳಗಾಯಿತು. ಸರಕಾರವನ್ನು ಉಳಿಸುವ ಪ್ರಯತ್ನದಲ್ಲಿ ಅದರ ಬೆಂಬಲಿಗರು ವಿಧಾನ ಸಭಾ ಸದಸ್ಯರಿಗೆ ವಿವಿಧ ಆಮಿಷಗಳನ್ನು ಒಡ್ಡಲು ತೊಡಗಿದರು. ಪಕ್ಷಾಂತರ ಮಾಡಿ ಬಂದ ಇಬ್ಬರು ಸದಸ್ಯರಿಗೆ ತಕ್ಷಣವೇ ಮಂತ್ರಿಪದವಿಗಳನ್ನು ಕೊಡಲಾಯಿತು.

ಈ ಹಂತದಲ್ಲಿ ಪ್ರಜಾಸತ್ತಾತ್ಮಕ, ಜಾತ್ಯಾತೀತ ಮತ್ತು ಮೂಲಭೂತ ಬದಲಾವಣೆಗಳನ್ನು ಬಯಸುವ ಎಲ್ಲಾ ಶಕ್ತಿಗಳೊಂದಿಗೆ ಸೇರಲು ಕಾಂಗ್ರೆಸ್ ಮತ್ತು ಅದರ ನಾಯಕ ಆಂಟನಿ ತೆಗೆದುಕೊಂಡ ನಿರ್ಧಾರ ನಿಜಕ್ಕೂ ಸ್ವಾಗತಾರ್ಹ. ಆ ಪಕ್ಷದ ಕಾರ್ಯನಿರ್ವಾಹಕವು ತನ್ನ ಸದಸ್ಯರೊಂದಿಗೆ, ಅಧ್ಯಕ್ಷ ಮತ್ತು ಕಾರ್ಯಕಾರಿ ಸಮಿತಿಯೊಂದಿಗೆ ಸುದೀರ್ಘ ಚರ್ಚೆ ನಡೆಸಿ ಲೋಕಸಭಾ ಚುನಾವಣೆಗಳಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿಯಾದರೂ ಇಂದಿರಾ ಕಾಂಗ್ರೆಸ್ಸಿನೊಂದಿಗೆ ಯಾವುದೇ ರೀತಿಯ ತಿಳುವಳಿಕೆ ಅಥವಾ ಹೊಂದಾಣಿಕೆಗೆ ಬರಬಾರದೆಂಬ ನಿರ್ಣಯ ಕೈಗೊಂಡಿತು. ಲೋಕಸಭಾ ಚುನಾವಣೆಗಳನ್ನು ಎದುರಿಸಲು ಮತ್ತು ರಾಜಕೀಯ ಶಕ್ತಿಗಳ ಮರು ಹೊಂದಾಣಿಕೆಯ ಉದ್ದೇಶವಿಟ್ಟುಕೊಂಡೇ, ಕಾಂಗ್ರೆಸ್ ಪಕ್ಷದ ಕಾರ್ಯನಿರ್ವಾಹಕವು ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳೊಡನೆ ಮಾತುಕತೆ ನಡೆಸುವ ತನ್ನ ಇಚ್ಛೆ ಪ್ರಕಟಿಸಿತು.

ಕೋಯಾ ಮತ್ತು ಅವರ ಸಹೋದ್ಯೋಗಿಗಳ ಭವಿಷ್ಯ ನಿರ್ಧಾರವಾದುದರ ಸೂಚನೆಯಾಗಿ ಈ ವಿದ್ಯಮಾನಗಳು ಗೋಚರಿಸಿದುವು. ಆದ್ದರಿಂದಲೇ ಅವರೆಲ್ಲರೂ ಬದಲಿ ಸರಕಾರದ ರಚನೆಯನ್ನು ತಡೆಯಲು ಪಿತೂರಿ ನಡೆಸಿದರು.

ಆ ಪಿತೂರಿಯ ಯಶಸ್ವಿಗೆ ಆ ಮೇಲಿನ ಘಟನೆಗಳೇ ಸಾಕ್ಷಿ. ಕೆ.ಪಿ.ಸಿ.ಸಿ.ಯ ಕಾರ್ಯನಿರ್ವಾಹಕ ಈ ನಿರ್ಧಾರ ತಳೆದ ಕೆಲವೇ ತಾಸುಗಳಲ್ಲಿ, ಆದರೆ ಅದನ್ನು ಗವರ್ನರರಿಗೆ ತಿಳಿಸುವ ಮುಂಚೆಯೇ, ವಿಧಾನ ಸಭೆಯನ್ನು ವಿಸರ್ಜಿಸಿ, ಚುನಾವಣೆಗಳನ್ನು ನಡೆಸಲು ಆಜ್ಞೆ ನೀಡುವಂತೆ ಆಗಿನ ಮುಖ್ಯಮಂತ್ರಿ ಗವರ್ನರರಿಗೆ ಸಲಹೆ ನೀಡಿದರು. ಕಾಂಗ್ರೆಸ್ ನಾಯಕರು ತಮ್ಮ ಪಕ್ಷದ ಬೆಂಬಲವನ್ನು ಹಿಂದೆಗೆಯುವ ತಮ್ಮ ನಿರ್ಧಾರವನ್ನು ಗವರ್ನರರಿಗೆ ಔಪಚಾರಿಕವಾಗಿ ತಿಳಿಸಿಲ್ಲವೆಂಬ ಒಂದೇ ಕಾರಣಕ್ಕಾಗಿ, ಗವರ್ನರ್ ಮತ್ತು ಮುಖ್ಯಮಂತ್ರಿ ಸಚಿವ ಸಂಪುಟಕ್ಕೆ ಬೆಂಬಲವಿತ್ತೆಂಬ, ಯಾರೂ ಒಪ್ಪಲಾರದ ನಿಲುಮೆ ತಳೆದರು.

ಈ ನಿಲುಮೆಯನ್ನು ಪುಷ್ಟೀಕರಿಸಲು ಹಿಂದಿನ ಎರಡು ಉದಾಹರಣೆಗಳನ್ನು ತೋರಿಸಲಾಯಿತು. ಅವೆಂದರೆ 1953ರ ತಿರುವಾಂಕೂರು ಕೊಚ್ಚಿಯ ಜಾನ್ ನೇತೃತ್ವದ ಸರಕಾರದ ಮತ್ತು 1970 ರ ಕೇರಳದ ಅಚ್ಯುತ ಮೆನನ್ ಸರಕಾರ. ಈ ಎರಡೂ ಸರಕಾರಗಳು ನೀಡಿದ ಸಲಹೆ ಮೇರೆಗೆ ಆಗಿನ ವಿಧಾನ ಸಭೆಗಳನ್ನು ವಿಸರ್ಜಿಸಲಾಗಿತ್ತು ಆದರೆ 1953ರಲ್ಲಿ ಮತ್ತು 1970ರಲ್ಲಿ ಬದಲಿ ಸರಕಾರ ರಚಿಸುವ ಸಾಮರ್ಥ್ಯ ಹೊಂದಿದ್ದ ಯಾವುದೇ ವಿರೋಧ ಪಕ್ಷವಿರಲಿಲ್ಲವೆಂಬ ಮತ್ತು ಈಗಿರುವ ವಿರೋಧ ಪಕ್ಷಗಳಿಗೆ 140 ಸದಸ್ಯರ ಪೈಕಿ 90 ಮಂದಿಯ ಬೆಂಬಲವಿದೆಯೆಂಬ ಸತ್ಯವನ್ನು ಬೇಕೆಂದೇ ಮರೆಮಾಚಲಾಯಿತು.

ಗವರ್ನರರು ಹಿಂದೆ ಜನತಾಪಕ್ಷದಲ್ಲಿ ವಿಲೀನಗೊಂಡ ಸಂಸ್ಥಾ ಕಾಂಗ್ರೆಸ್ಸಿನ ನಾಯಕಿಯಾಗಿದ್ದರು ಮತ್ತು ಈ ಜನತಾಪಕ್ಷವು ಇಂದಿರಾ ಕಾಂಗ್ರೆಸ್ ನೇತೃತ್ವದ ಒಕ್ಕೂಟದಲ್ಲಿದೆಯೆಂಬುದು ಸರ್ವವಿದಿತ. ಆದ್ದರಿಂದಲೇ ಆಕೆಗೆ ಮುಹಮದ್ ಕೋಯಾ ಅವರನ್ನು ಮುಖ್ಯಮಂತ್ರಿ ಸ್ಥಾನಕ್ಕೆ ಏರಿಸುವಂತೆ ಇಂದಿರಾ ಕಾಂಗ್ರೆಸ್ ನೀಡಿದ ಸಲಹೆಯನ್ನು ಸ್ವೀಕರಿಸುವಲ್ಲಿ ಯಾವ ಆತಂಕವೂ ಉಂಟಾಗಲಿಲ್ಲ. ಆದರೆ ಕೋಯಾರ ಬದಲಿಗೆ ಇನ್ನೊಬ್ಬರನ್ನು ಮುಖ್ಯಮಂತ್ರಿಯಾಗಿ ಆಯ್ಕೆ ಮಾಡುವ ಪ್ರಶ್ನೆ ಬಂದಾಗ ಆಕೆ ಮೀನ-ಮೇಷ ಎಣಿಸಿ ಕೊನೆಗೆ ವಿಧಾನ ಸಭೆಯನ್ನು ವಿಸರ್ಜಿಸಲು ನೀಡಿದ ಸಲಹೆಯನ್ನು ಅಂಗೀಕರಿಸಿದರು.

ಗವರ್ನರರ ಈ ವರ್ತನೆಯು ಆಕೆಯ ರಾಜಕೀಯ ಪಕ್ಷಪಾತವನ್ನು ತೋರಿಸುತ್ತದಲ್ಲದೆ, ಇಂತಹ ಸಂದರ್ಭಗಳಲ್ಲಿ ಗವರ್ನರರುಗಳು ಮಾಡಬಹುದಾದ ಹಾವಳಿಯನ್ನೂ ತೋರಿಸುತ್ತದೆ. ಆದರೆ ಆಕೆಯ ಈ ಕೃತ್ಯವು ಕೆಲವು ತಿಂಗಳುಗಳ ಹಿಂದೆಯೇ ಪ್ರಾರಂಭವಾಗಿದ್ದ ರಾಜಕೀಯ ಶಕ್ತಿಗಳ ಮರು ಹೊಂದಾಣಿಕೆಯ ಯತ್ನವನ್ನು ತಡೆಯುವಲ್ಲಿ ವಿಫಲವಾಯಿತು. ಈಗ ಹತ್ತಿರ ಬಂದ ಪಕ್ಷಗಳು ಈ ಮರು ಹೊಂದಾಣಿಕೆಯತ್ತ ಕೆಲವು ತಿಂಗಳುಗಳ ಹಿಂದೆಯೇ ಸರಿಯತೊಡಗಿದ್ದುವು. ಆದರೆ ಪೂರ್ಣಾವಧಿಗಿಂತ ಮುಂಚಿತವಾಗಿ ವಿಧಾನ ಸಭೆಯು ವಿಸರ್ಜಿಸಲ್ಪಟ್ಟು, ಚುನಾವಣೆಗಳು ನಡೆಯುವುದನ್ನು ತಡೆಯುವುದೇ ಅವುಗಳ ಉದ್ದೇಶವಾದುದರಿಂದ ಮರು ಹೊಂದಾಣಿಕೆಯ ನಿರ್ಧಾರವನ್ನು ಮುಂದೆ ಹಾಕಲಾಯಿತು.

ಆದರೆ ರಾಜ್ಯ ಸಭೆಗೆ ಏಪ್ರಿಲ್ ತಿಂಗಳಿನಲ್ಲಿ ನಡೆದ ಚುನಾವಣೆಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಉಮೇದುವಾರರನ್ನು ಬೆಂಬಲಿಸುವಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ, ಕ್ರಾಂತಿಕಾರಿ ಸಮಾಜವಾದಿ ಪಕ್ಷ, ಕಾಂಗ್ರೆಸ್, ಮುಸ್ಲಿಂ ಲೀಗ್ ಮತ್ತು ಪ್ರಜಾ ಸೋಷಲಿಸ್ಟ್ ಪಕ್ಷಗಳಿಗೆ ಈ ಕಾತರ ಅಡ್ಡಿಯುಂಟುಮಾಡಿರಲಿಲ್ಲ. ಅಲ್ಲದೆ ಸ್ಥಳೀಯ ಸಂಸ್ಥೆಗಳಿಗೆ ನಡೆದ ಚುನಾವಣೆಗಳಲ್ಲಿಯೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವಲ್ಲಿ ಕಾಂಗ್ರೆಸ್ ಮತ್ತು ಕ್ರಾಂತಿಕಾರಿ ಸಮಾಜವಾದಿ ಪಕ್ಷಗಳಿಗೆ ಇದು ಅಡ್ಡಿಯಾಗಲಿಲ್ಲ. ಈಗ ಅಸ್ತಿತ್ವಕ್ಕೆ ಬಂದ ಈ ಹೊಸ ಸಂಯುಕ್ತ ರಂಗದ ಪ್ರತಿಯೊಂದು ಘಟಕವೂ ಈ ಹೊಸ ಒಕ್ಕೂಟಕ್ಕಾಗಿ ತಡಕಾಡುತ್ತಿತ್ತು.

ಲೋಕಸಭಾ ವಿಸರ್ಜನೆಯು ಈ ಕ್ರಿಯೆಯನ್ನು ತ್ವರಿತಗೊಳಿಸಿತು. ಭಾರತ ಕಮ್ಯುನಿಸ್ಟ್ ಪಕ್ಷ ಮತ್ತು ಕ್ರಾಂತಿಕಾರಿ ಸಮಾಜವಾದಿ ಪಕ್ಷಗಳು ಈ ಸಮಸ್ಯೆಯನ್ನು ಪುನರವಲೋಕಿಸುವಂತೆ ಮಾಡಿತು. ರಾಜಕೀಯ ಶಕ್ತಿಗಳ ಮರು ಹೊಂದಾಣಿಕೆಯ ಸಾಧ್ಯತೆಯನ್ನು ಪರಿಶೀಲಿಸುವ ಅವಶ್ಯಕತೆಯನ್ನು ಆಳುವ ಕೂಟದ ಇತರ ಘಟಕಗಳೂ ಮನಗಂಡವು. ಆದ್ದರಿಂದ ಆ ಎಲ್ಲಾ ಪಕ್ಷಗಳೂ ರಾಜಕೀಯ ಶಕ್ತಿಗಳ ಮರು ಹೊಂದಾಣಿಕೆಯ ಸಲುವಾಗಿ ಮತ್ತು ಲೋಕಸಭೆ ಹಾಗೂ ರಾಜ್ಯ ವಿಧಾನ ಸಭೆಗಳಿಗೆ ಚುನಾವಣೆಗಳು ಒಂದೇ ಬಾರಿಗೆ ನಡೆಯುವಂತೆ ಮಾಡುವ ಉದ್ದೇಶದಿಂದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಇತರ ವಿರೋಧ ಪಕ್ಷಗಳೊಂದಿಗೆ ಮಾತುಕತೆ ಪ್ರಾರಂಭಿಸುವ ನಿರ್ಧಾರವನ್ನು ಜೊತೆಯಾಗಿ ಕೈಗೊಂಡವು.

ಭಾರತ ಕಮ್ಯುನಿಸ್ಟ್ ಪಕ್ಷ, ಮತ್ತು ಕ್ರಾಂತಿಕಾರಿ ಸಮಾಜವಾದಿ ಪಕ್ಷಗಳು ಹೊಸ ಸಂದರ್ಭದ ಅವಶ್ಯಕತೆಗಳಿಗೆ ಶೀಘ್ರವಾಗಿ ವ್ಯಕ್ತಪಡಿಸಿದ ಪ್ರತಿಕ್ರಿಯೆ ನಿಜಕ್ಕೂ ಪ್ರಶಂಸನೀಯ. ಮೊದಲು ಎಡ ಪಕ್ಷಗಳೊಂದಿಗೆ ಮೈತ್ರಿಯ ಕುರಿತಾಗಿ ಉತ್ಸಾಹ ತಳೆದಿದ್ದ ಕಾಂಗ್ರೆಸ್ ಡೋಲಾಯಮಾನವಾಗಿದ್ದರೂ, ಭಾರತ ಕಮ್ಯು

[6ನೇ ಪುಟ ನೋಡಿ]

ಅಫ್ಘಾನಿಸ್ತಾನ್ ಸರಕಾರವನ್ನು ಉರುಳಿಸಲು ಸಾಮ್ರಾಜ್ಯವಾದಿಗಳ ಸಂಚು

ಅಫ್‌ಘಾನಿಸ್ತಾನದಲ್ಲಿ ಇತ್ತೀಚೆಗೆ ಉಂಟಾಗಿರುವ ಬೆಳವಣಿಗೆಗಳ ಬಗ್ಗೆ ದೇಶದ ಉಸ್ತುವಾರಿ ಸರ್ಕಾರ ಹಾಗೂ ಜನತಾಪಕ್ಷ ಮತ್ತು ಕಾಂಗ್ರೆಸ್ (ಐ) ಪಕ್ಷಗಳ ಮುಖಂಡರು ತೆಗೆದುಕೊಂಡಿರುವ ನಿಲುವು ಕಳವಳಕಾರಿಯಾದದ್ದು ಎಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಪೊಲಿಟ್ ಬ್ಯೂರೋ ಅಭಿಪ್ರಾಯಪಟ್ಟಿದೆ.

ಅಫ್‌ಘಾನಿಸ್ತಾನದ ಜನತೆ 78ರ ಏಪ್ರಿಲ್‌ನಲ್ಲಿ ಪೀಪಲ್ಸ್ ಡೆಮಾಕ್ರಟಿಕ್ ಪಾರ್ಟಿ ಹಾಗೂ ಸೈನ್ಯದಲ್ಲಿರುವ ಪ್ರಗತಿಪರ ಶಕ್ತಿಗಳ ಬೆಂಬಲದಿಂದ ದಬ್ಬಾಳಿಕೆಯ ದಾವೂದ್ ಸರಕಾರವನ್ನು ಕಿತ್ತೊಗೆದು ಹೊಸ ಜನತಾ ಪ್ರಜಾಪ್ರಭುತ್ವವನ್ನು ಸ್ಥಾಪಿಸಿದಾಗ ಹೊಸ ಸರಕಾರವನ್ನು ಮಾನ್ಯ ಮಾಡಿದ ದೇಶಗಳಲ್ಲಿ ಭಾರತವೂ ಒಂದು.

ಹೊಸ ಸರಕಾರ ಅಧಿಕಾರಕ್ಕೆ ಬಂದಮೇಲೆ ದೇಶದಲ್ಲಿದ್ದ ಜಮೀನ್ದಾರಿ ಪದ್ಧತಿಯನ್ನು ತೊಡೆದುಹಾಕಿ, ಜನಗಳಿಗೆ ಅನುಕೂಲ ಮಾಡಲು ಜಮೀನ್ದಾರಿ ಪದ್ಧತಿಯನ್ನು ರದ್ದುಮಾಡಿ, ಉಳುವವನಿಗೆ ಭೂಮಿ ಎಂದು ಘೋಷಿಸಿತಲ್ಲದೆ ಇತರೆ ಪ್ರಗತಿಪರ ಕಾರ್ಯಕ್ರಮಗಳಿಗೆ ಆದ್ಯತೆ ನೀಡಲಾಯಿತು. ಆದರೆ ದೇಶದಲ್ಲಿ ಸೌಲಭ್ಯಗಳನ್ನು ಪಡೆದುಕೊಂಡು ಸುಖವಾಗಿದ್ದ ಪ್ರತಿಗಾಮಿಗಳಿಗೆ ಇದನ್ನು ಸಹಿಸುವುದಕ್ಕೆ ಆಗಲಿಲ್ಲ. ಈ ಶಕ್ತಿಗಳು ಅಮೇರಿಕನ್ ಸಾಮ್ರಾಜ್ಯವಾದಿಗಳು ಹಾಗೂ ಪಾಕಿಸ್ತಾನದ ಮಿಲಿಟರಿ ಸರ್ವಾಧಿಕಾರಿಗಳಿಂದ ಬೆಂಬಲ ಪಡೆದು ಪ್ರತಿಕ್ರಾಂತಿಯನ್ನು ಯೋಜಿಸಿದರು. ಪ್ರತಿಕ್ರಾಂತಿಕಾರಿಗಳಿಗೆ ಪಾಕಿಸ್ತಾನದ ಕ್ಯಾಂಪುಗಳಲ್ಲಿ ತರಬೇತಿ ನೀಡಲಾಯಿತಲ್ಲದೆ, ಅಮೇರಿಕದ ಶಸ್ತ್ರಾಸ್ತ್ರಗಳನ್ನು ಸಹಾಯಕ್ಕಾಗಿ ಕೊಡಲಾಯಿತು. ಅಮೇರಿಕನ್ ಸೈನ್ಯಾಧಿಕಾರಿಗಳು ತರಬೇತಿ ಶಿಬಿರಗಳಿಗೆ,ಅಫ್‌ಘಾನಿಸ್ತಾನದ ಗಡಿಪ್ರದೇಶದ ಒಳಗೂ ಹೋಗಿ ಚಟುವಟಿಕೆಗಳನ್ನು ಪರಿಶೀಲಿಸಿದರು. ಈ ಪ್ರತಿಕ್ರಾಂತಿಗಾರರ ಮುಖಂಡನೊಬ್ಬ ತಮ್ಮ ಯೋಜನೆಯನ್ನು ಕಾರ್ಯಗತಗೊಳಿಸಲು ಅಮೇರಿಕಾಕ್ಕೆ ಹೋಗಿಬಂದ.

ನಿಜವಾಗಿಯೂ ಸಾಮ್ರಾಜ್ಯವಾದಿಗಳ ಈ ಹಸ್ತಕ್ಷೇಪವನ್ನು ಹಸ್ತಕರ ಮೂಲಕ ಜನತಾ ಪ್ರಜಾಪ್ರಭುತ್ವವನ್ನು ಉರುಳಿಸಲು ನಡೆಸಿದ ಆಕ್ರಮಣವೆನ್ನಬಹುದು. ಪರಿಸ್ಥಿತಿ ಗಂಭೀರವಾದದ್ದನ್ನು ಕಂಡು ಕಾಬೂಲ್ ಸರ್ಕಾರ, ಏಪ್ರಿಲ್ ಕ್ರಾಂತಿಯ ಸಾಧನೆಗಳನ್ನು ಉಳಿಸಿಕೊಳ್ಳಲು, ದೇಶದ ಸ್ವಾತಂತ್ರ್ಯ, ಸಮಗ್ರತೆ, ಶಾಂತಿ ಮತ್ತು ಸುವ್ಯವಸ್ಥೆ, ಗಡಿಗಳ ರಕ್ಷಣೆಗಾಗಿ 5ನೇ ಡಿಸೆಂಬರ್ 1978 ರಂದು ಅಫ್‌ಘಾನಿಸ್ತಾನ-ಸೋವಿಯೆತ್ ಯೂನಿಯನ್‌ಗಳ ಮಧ್ಯೆ ಆಗಿರುವ ಸ್ನೇಹ ಒಪ್ಪಂದದ ಪ್ರಕಾರ ತನಗೆ ರಾಜಕೀಯ, ನೈತಿಕ, ಆರ್ಥಿಕ ಹಾಗೂ ಸೈನಿಕ ಸಹಾಯ ನೀಡಬೇಕೆಂದು ಸೋವಿಯೆತ್ ಸರಕಾರವನ್ನು ಕೇಳಿಕೊಂಡಿತು.

ಮಾಸ್ಕೋ ಪ್ರಕಟಣೆ ಸ್ಪಷ್ಟಪಡಿಸಿರುವಂತೆ, ಸೋವಿಯೆತ್ ಸರಕಾರ ಅಫ್‌ಘಾನಿಸ್ತಾನ್ ಸರಕಾರದ ಕೋರಿಕೆ, ಸ್ನೇಹ ಒಪ್ಪಂದದ ಕರಾರಿನಂತೆ ಹಾಗೂ ವಿಶ್ವಸಂಸ್ಥೆಯ 51ನೇ ವಿಧಿಯನ್ವಯ, ಆಕ್ರಮಣಕಾರರನ್ನು ಮತ್ತು ಪ್ರತಿಕ್ರಾಂತಿಗಾರರನ್ನು ಹಿಂದಕ್ಕೆ ಓಡಿಸಲು ಸೈನ್ಯವನ್ನು ಕಳಿಸಿತು. ಸೈನ್ಯವನ್ನು ಅಫ್‌ಘಾನಿಸ್ತಾನದ ನೆರೆಯ ದೇಶಗಳ ಮೇಲೆ (ಇವು ರಷ್ಯಾದ ನೆರೆಯ ರಾಷ್ಟ್ರಗಳೂ ಹೌದು) ಧಾಳಿ ನಡೆಸಲು ಕಳಿಸಿದ್ದಲ್ಲವೆಂದು ಸೋವಿಯೆತ್ ಸರಕಾರ ಸ್ಪಷ್ಟಪಡಿಸಿದೆ.

ಸೋವಿಯೆತ್ ಸರಕಾರದ ಕ್ರಮವನ್ನು ವಿರೋಧಿಸುವುದು ಎಂದರೆ ಅಮೇರಿಕನ್ ಸಾಮ್ರಾಜ್ಯವಾದಿಗಳು ಹಾಗೂ ಪಾಕಿಸ್ತಾನದ ಮಿಲಿಟರಿ ಸರ್ವಾಧಿಕಾರಿಗಳನ್ನು ಬೆಂಬಲಿಸುವುದು ಎಂದರ್ಥ.

ಅಮೇರಿಕಾ ಈಗಾಗಲೇ ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ಸರಬರಾಜು ಮಾಡಲು ಹಾಕಿದ ನಿಷೇಧವನ್ನು ತೆಗೆದುಹಾಕಿದೆಯಲ್ಲದೆ, ನೂರು ಮಿಲಿಯನ್ ಡಾಲರ್‌ಗೂ ಹೆಚ್ಚು ಬೆಲೆ ಬಾಳುವ ಆಯುಧಗಳನ್ನು ಕೂಡಲೇ ಪಾಕಿಸ್ತಾನಕ್ಕೆ ರವಾನಿಸಿದೆ. ಅಲ್ಲದೆ, ಮಧ್ಯಪ್ರಾಚ್ಯದಲ್ಲಿ, ಪಶ್ಚಿಮ ಏಶಿಯಾದಲ್ಲಿ ತನ್ನ ನೌಕಾ ಬಲವನ್ನು ಹೆಚ್ಚಿಸಿದೆ, ಮಧ್ಯಪ್ರವೇಶಕ್ಕೆ ಸಿದ್ಧವಾಗಿದೆ.

ಈ ಸಂದರ್ಭದಲ್ಲಿ ಅಲಿಪ್ತ ಚಳುವಳಿ ಹಾಗೂ ಭಾರತ, ಅಮೇರಿಕನ್ ಸಾಮ್ರಾಜ್ಯವಾದಿಗಳು ಮತ್ತವರ ಬಾಲಬಡುಕರ ವಿರುದ್ಧ ಬಲವಾದ ಪ್ರತಿಭಟನೆಯನ್ನು ವ್ಯಕ್ತಪಡಿಸಬೇಕಾಗಿದೆ. ಉಸ್ತುವಾರಿ ಸರಕಾರ ಅಮೇರಿಕಾ ದೇಶವು ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ಸರಬರಾಜು ಮಾಡುವುದರಿಂದ ಭಾರತಕ್ಕೆ ಗಂಡಾಂತರಕಾರಿ ಎಂಬುದನ್ನು ಮನಗಂಡಿರುವ ಸರಕಾರ, ಇಡೀ ಸಮಸ್ಯೆಯನ್ನು ಅರ್ಥಮಾಡಿಕೊಳ್ಳುವ ಬದಲು, ಸೋವಿಯೆತ್ ಯೂನಿಯನ್ ಅಫ್‌ಘಾನಿಸ್ತಾನಕ್ಕೆ ಬೆಂಬಲ ನೀಡಿದ್ದನ್ನು ವಿರೋಧಿಸಿದೆ. ಇದರಿಂದ ಪಾಕಿಸ್ತಾನಕ್ಕೆ ಆಯುಧ ಸರಬರಾಜು ಮಾಡಬಾರದೆನ್ನುವ ಅದರ ಮೂಲ ಧೋರಣೆ ದುರ್ಬಲವಾಗಿದೆ.

ಇಂದಿರಾಗಾಂಧಿಯವರು ಈ ಸಂದರ್ಭದಲ್ಲಿ ಸಂಪೂರ್ಣವಾಗಿ ತಮ್ಮ ನಿಜವಾದ ಬಣ್ಣವನ್ನು ತಾವೇ ತೋರಿಸಿಕೊಂಡಿದ್ದಾರೆ. ಅಫ್‌ಘಾನಿಸ್ತಾನಕ್ಕೆ ಸೋವಿಯೆತ್ ಯೂನಿಯನ್ ಸಹಾಯ ಮಾಡಿದ್ದನ್ನು ಸಮ್ಮತಿಸದ ಇಂದಿರಾಗಾಂಧಿಯವರು, ಸಾಮ್ರಾಜ್ಯವಾದಿಗಳ ವಿರುದ್ಧ ಇರಾನ್ ಜನತೆ ಹೋರಾಡುವುದನ್ನೂ ವಿರೋಧಿಸಿದ್ದಾರೆ. ಇರಾನ್ ಜನತೆಗೆ ರಾಕ್ಷಸನಂತೆ ವರ್ತಿಸಿದ ಪದಚ್ಯುತ ಷಾನ ವಿಚಾರಣೆಯನ್ನು ಸಹಾ ಇಂದಿರಾಗಾಂಧಿಯವರು ವಿರೋಧಿಸುತ್ತಿರುವುದು, ಅವರು ಎಷ್ಟರ ಮಟ್ಟಿಗೆ ಸಿ.ಐ.ಎ. ಹಾಗೂ ಅಮೇರಿಕಾದ ಸಾಮ್ರಾಜ್ಯವಾದಿಗಳಿಗೆ ವಿರೋಧ ಎನ್ನುವುದನ್ನು ಸ್ಪಷ್ಟಗೊಳಿಸಿದೆ.

ಆದ್ದರಿಂದ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ಯು ಜನಗಳಿಗೆ ಅಮೇರಿಕಾದ ಚಟುವಟಿಕೆಗಳ ಬಗ್ಗೆ ಎಚ್ಚರದಿಂದ ಇರಲು ಹಾಗೂ ಇಂತಹ ಪ್ರಯತ್ನಗಳನ್ನು ವಿರೋಧಿಸಲು ಕರೆ ನೀಡಿದೆ. ಅಲ್ಲದೆ, ಸೋವಿಯೆತ್ ಯೂನಿಯನ್ ಕ್ರಮವನ್ನು ಖಂಡಿಸುವವರು, ಅಮೇರಿಕಾದ ದುಷ್ಕೃತ್ಯಗಳನ್ನು ತೆರೆಯ ಹಿಂದೆ ಅಡಗಿಸಿ, ಆ ಮೂಲಕ ನಮ್ಮ ದೇಶಕ್ಕೆ ಸಾಮ್ರಾಜ್ಯವಾದಿಗಳಿಂದ ಮತ್ತವರ ಬಾಲಬಡುಕರಿಂದ ಆಗುವ ಅನಾಹುತಗಳನ್ನು ಗಣನೆಗೆ ಬಾರದಂತೆ ಮಾಡುತ್ತಿರುವುದನ್ನು ಗಮನಿಸಲು ತಿಳಿಸಿದೆ. ಅಫ್‌ಘಾನಿಸ್ತಾನದ ಜನತೆ ಮತ್ತವರ ಜನತಾ ಪ್ರಜಾಪ್ರಭುತ್ವ, ಏಪ್ರಿಲ್ ಕ್ರಾಂತಿಯ ಗಳಿಕೆಯನ್ನು ವಿಸ್ತರಿಸಲು ಹಾಗೂ ಪ್ರತಿಗಾಮಿಗಳು ಅಧಿಕಾರಕ್ಕೆ ಬಾರದಂತೆ ತಡೆಯಲು ಹೋರಾಡುತ್ತಿದ್ದಾರೆ. ಇಂತಹ ಸಮಯದಲ್ಲಿ ನಮ್ಮೆಲ್ಲರ ಸೌಹಾರ್ದ ಬೆಂಬಲ ಅವರಿಗೆ ಕೊಡುವುದು ನಮ್ಮ ಕರ್ತವ್ಯ.

○

ಇರಾನಿನ ಜನತೆಯನ್ನು ಬೆಂಬಲಿಸಿರಿ

ಇರಾನಿನ ಜನತೆಗೆ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಒಡ್ಡುತ್ತಿರುವ ಬೆದರಿಕೆ ಮತ್ತು ಅದರ ಮೇಲೆ ಹೇರುತ್ತಿರುವ ಒತ್ತಡಗಳನ್ನು ಅತ್ಯುಗ್ರವಾಗಿ ಖಂಡಿಸಬೇಕಾಗಿದೆ.

ಸೇನಾ ಕಾರ್ಯಾಚರಣೆ ಮಾಡುವುದಿಲ್ಲವೆಂಬ ಅಧ್ಯಕ್ಷ ಕಾರ್ಟರರ ಹೇಳಿಕೆಗಳ ಹೊರತಾಗಿಯೂ ಈ ಪ್ರದೇಶದಲ್ಲಿ ಹಿಂದೆಂದೂ ಕಂಡಿರದ ಪ್ರಮಾಣದಲ್ಲಿ ಸೈನ್ಯ ಜಮಾವಣೆಯಾಗುತ್ತಿದೆ. ಈಗಾಗಲೇ ಒಟ್ಟು ಸುಮಾರು 20 ಅಮೇರಿಕನ್ ಯುದ್ಧನೌಕೆಗಳು ಅರಬೀ ಸಮುದ್ರದಲ್ಲಿ ಇವೆ. ವಾಯುದಳದ ಸುಮಾರು ಮೂರನೇ ಒಂದರಷ್ಟು ಟೆಹರಾನ್ ಮೇಲೆ ದಾಳಿ ಮಾಡಲು ಸನ್ನದ್ಧವಾಗಿದೆ ಅರಬ್ ರಾಷ್ಟ್ರಗಳ ಎಣ್ಣೆಗಣಿಗಳನ್ನು ವಶಪಡಿಸಿಕೊಳ್ಳುವ ಉದ್ದೇಶದಿಂದ ಒಂದು ಲಕ್ಷಕ್ಕೂ ಹೆಚ್ಚಿದ ಬಲವುಳ್ಳ "ತ್ವರಿತ ಸೇನಾ ಪಡೆ" (rapid reaction corps) ಯೊಂದು ನಿರ್ಮಿಸಲ್ಪಡುತ್ತಿದೆ. ಹಿಂದೂ ಸಾಗರದಲ್ಲಿ "ಪಂಚಮ ಪಡೆ" (fifth fleet) ಯೊಂದರ ನಿರ್ಮಾಣಕ್ಕೆ ಭರದಿಂದ ಸಿದ್ಧತೆಗಳು ನಡೆಯುತ್ತಿವೆ. ಡೀಗೋ ಗಾರ್ಸಿಯಾದಲ್ಲಿರುವ ಅಮೇರಿಕನ್ ಬೃಹತ್ ನೌಕಾ ಮತ್ತು ವಿಮಾನ ನೆಲೆಯನ್ನು ಇನ್ನೂ ವೃದ್ಧಿಗೊಳಿಸಿ, ಅಣ್ವಸ್ತ್ರಗಳಿಂದ ಸುಸಜ್ಜಿತಗೊಳಿಸಲಾಗುತ್ತಿದೆ. ಈಜಿಪ್ಟ್-ಇಸ್ರೇಲ್ ಒಪ್ಪಂದದನ್ವಯ ಈಜಿಪ್ಟ್‌ಗೆ ಮರಳಿಸಲಾಗುತ್ತಿರುವ 'ನೆಗೇವ್' ಮರುಭೂಮಿಯಲ್ಲಿರುವ ಅಮೇರಿಕದ ವಾಯುನೆಲೆಗಳನ್ನು ಖಾಯಂ ಆಗಿ ಭದ್ರಗೊಳಿಸುವ ಯೋಜನೆಗಳನ್ನು ಪರಿಶೀಲಿಸಲಾಗುತ್ತಿದೆ. ಈ ಯುದ್ಧಸಿದ್ಧತೆಗಳೊಂದಿಗೇ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಪಶ್ಚಿಮದ ಇತರ ಸಾಮ್ರಾಜ್ಯಶಾಹಿಗಳೊಡಗೂಡಿ ಇರಾನಿನ ಮೇಲೆ ವ್ಯಾಪಾರ ನಿರ್ಬಂಧವನ್ನೂ, ಆರ್ಥಿಕ ತಡೆಯನ್ನೂ ಹೇರಲು ಹವಣಿಸುತ್ತಿದ್ದಾರೆ.

ಅಮೇರಿಕನ್ ಸಾಮ್ರಾಜ್ಯಶಾಹಿಗಳ ಈ ಯುದ್ಧಸಿದ್ಧತೆಗಳು ಖಂಡನಾರ್ಹವಾಗಿವೆಯಲ್ಲದೆ, ತಾನು ನಡೆಸಿದ ಅತ್ಯಂತ ಕ್ರೂರ ಹಾಗೂ ಹೇಯ ಕೃತ್ಯಗಳಿಗೆ ವಿಚಾರಣೆಗೊಳಪಡಿಸಲು ಮತ್ತು ಶಿಕ್ಷೆವಿಧಿಸಲು ಪದಚ್ಯುತದೊರೆ ಷಾ ರೇಜಾ ಪಹ್ಲವಿಯನ್ನು ತಮ್ಮ ವಶಕ್ಕೊಪ್ಪಿಸಬೇಕೆಂಬ ಇರಾನಿನ ಜನತೆಯ ಬೇಡಿಕೆಗೆ ಪೂರ್ಣ ಬೆಂಬಲ ನೀಡುವುದಗತ್ಯವಾಗಿದೆ.

ಷಾ ಗದ್ದುಗೆಯಲ್ಲಿದ್ದಾಗ ಅಮೇರಿಕನ್ ಸಾಮ್ರಾಜ್ಯಶಾಹಿಗಳ ಕೈಗೊಂಬೆಯಾಗಿ ವರ್ತಿಸಿ, ತನ್ನ ದೇಶದ ಮುಖ್ಯ ಹಿತಾಸಕ್ತಿಗಳನ್ನು ಅವರಿಗೆ ಮಾರಿದ್ದಲ್ಲದೆ, ಅಮೇರಿಕನ್ ಬಹುರಾಷ್ಟ್ರೀಯ ಕಂಪೆನಿಗಳಿಗೆ ಅಪಾರ ಲಾಭಗಿಟ್ಟಿಸಲು ಅವಕಾಶಗಳನ್ನು ಮಾಡಿಕೊಟ್ಟಿದ್ದ. ಷಾನ ಆಳ್ವಿಕೆಯು ಜಗತ್ತಿನಲ್ಲೇ ಅತ್ಯಂತ ಕ್ರೂರವಾಗಿತ್ತು. ಅವನ ಅಧಿಕಾರಾವಧಿಯಲ್ಲಿ ಜನತೆಗೆ ಯಾವ ನಾಗರಿಕ ಹಕ್ಕುಗಳೂ ಇರಲಿಲ್ಲ. ಸಾವಿರಾರು ಜನರು ಗುಪ್ತಚರ ವಿಭಾಗದ ಕೈಯಲ್ಲಿ ಚಿತ್ರಹಿಂಸೆಗೆ ಗುರಿಯಾಗಿ ಸತ್ತಿದ್ದರಲ್ಲದೆ, ಅಸಂಖ್ಯಾತ ಜನರು ಅತ್ಯಂತ ಅಮಾನುಷವಾದ ಸೆರೆಮನೆಗಳಿಗೆ ದೂಡಲ್ಪಟ್ಟಿದ್ದರು. ತೈಲಸಂಪದ್ಭರಿತವಾದ ಇರಾನಿನ ಜನಕೋಟಿಯು ಬಡತನ ಮತ್ತು ಕಷ್ಟಕಾರ್ಪಣ್ಯಗಳಿಂದ ತೊಳಲಾಡುತ್ತಿದ್ದಾಗ ರೇಜಾ ಪಹ್ಲವಿ ಮತ್ತು ಅವನ ಕುಟುಂಬ ರಾಷ್ಟ್ರದ ಸಂಪತ್ತನ್ನು ಕೊಳ್ಳೆ ಹೊಡೆದು ತಮ್ಮ ಬೊಕ್ಕಸವನ್ನು ತುಂಬಿಕೊಳ್ಳುವ ಉದ್ದೇಶದಿಂದ ಬಿಲಿಯಗಟ್ಟಲೆ ಡಾಲರ್‌ಗಳನ್ನು ದೇಶದಿಂದ ಹೊರಗೆ ಒಯ್ದಿದ್ದರು.

ಜಗತ್ತಿನ ಪ್ರತಿಯೊಂದು ಅಮೇರಿಕನ್ ದೂತಾವಾಸವೂ ಸಿ.ಐ.ಎ.ಯ ಗುಪ್ತಚರ ಜಾಲವೆಂಬುದು ಜಗತ್ತಿನ ಎಲ್ಲಾ ಸ್ವಾತಂತ್ರ್ಯಪ್ರಿಯ ಜನರಿಗೂ ತಿಳಿದಿರುವುದನ್ನು ಕಾರ್ಟರರ ಸರಕಾರಕ್ಕೆ ನೆನಪಿಸಬೇಕಾಗಿದೆ. ಟೆಹರಾನ್‌ನಲ್ಲಿರುವ ಅಮೇರಿಕನ್ ದೂತಾವಾಸದ ಕೆಲವು ಸಿಬ್ಬಂದಿಗಳು ಸಿ.ಐ.ಎ.ಯೊಂದಿಗೆ ಸಂಪರ್ಕ ಹೊಂದಿದ್ದರೆಂಬುದಕ್ಕೆ ಅಲ್ಲಗಳೆಯಲು ಅಸಾಧ್ಯವಾದ ಅನೇಕ ಲಿಖಿತ ಪುರಾವೆಗಳು ಇರಾನಿನ ಜನತೆಗೆ ದೊರೆತಿವೆ. ತಮ್ಮ ದೇಶದ ವಿರುದ್ಧ ನಡೆಸುತ್ತಿರುವ ಈ ಗುಪ್ತಚರ ಚಟುವಟಿಕೆಗಳನ್ನು ಕೊನೆಗಾಣಿಸಬೇಕೆಂಬ ಇರಾನ್ ಜನತೆಯ ಕರೆ ನ್ಯಾಯಯುತವಾಗಿದೆ.

ತಾನು ನಡೆಸಿದ ಅನೇಕ ಅಮಾನುಷ ಅಪರಾಧಗಳಿಗೆ ಈ ಪದಚ್ಯುತ ಸರ್ವಾಧಿಕಾರಿ ವಿಚಾರಣೆ ಮತ್ತು ಶಿಕ್ಷೆಗೆ ಗುರಿಯಾಗಬೇಕೆಂಬ ಇರಾನಿನ ಜನರ ಬೇಡಿಕೆಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿರುವ ಜಗತ್ತಿನ ಎಲ್ಲಾ ಜನರ ಬೆಂಬಲವಿದೆ. ಅಮೇರಿಕನ್ ಸಾಮ್ರಾಜ್ಯಶಾಹಿಯ ವಿರುದ್ಧ ಜಗತ್ತಿನ ಬೇರೆಬೇರೆ ಕಡೆಗಳಲ್ಲಿ ನಡೆದ ಮತಪ್ರದರ್ಶನಗಳು ಜನರ ಕೋಪಕ್ಕೆ ಸಾಕ್ಷ್ಯಗಳಾಗಿವೆ.

ಇಂತಹ ಪರಿಸ್ಥಿತಿಯಲ್ಲಿ ಇರಾನೀಯರಿಗೆ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಒಡ್ಡುತ್ತಿರುವ ಬೆದರಿಕೆಗಳಿಗೆ ಪ್ರತಿಯಾಗಿ ಬೆಂಬಲ ನೀಡುವುದು ಭಾರತೀಯರೆಲ್ಲರ ಆದ್ಯಕರ್ತವ್ಯವಾಗಿದೆ.

Courtesy – Peoples' Democracy dated 16-12-79

●

ಚಂದಾ ವಿವರ

ಬಿಡಿಪ್ರತಿ	40 ಪೈಸೆ
6 ತಿಂಗಳಿಗೆ	10 ರೂ.
ಒಂದು ವರ್ಷಕ್ಕೆ	20 ರೂ.

ಕ್ಯೂಬಾಗೆ ಶುಭಾಶಯಗಳು

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕ್ಯೂಬಾದ ಜನತೆಗೆ ಹಾಗೂ ಕ್ಯೂಬಾ ಕಮ್ಯುನಿಸ್ಟ್ ಪಕ್ಷಕ್ಕೆ, ಜನವರಿ ಒಂದರಂದು ಆಚರಿಸುತ್ತಿರುವ ರಾಷ್ಟ್ರೀಯ ದಿನಾಚರಣೆ ಹಾಗೂ ಇಪ್ಪತ್ತೊಂದನೇ ಕ್ಯೂಬನ್ ಕ್ರಾಂತಿಯ ವಿಜಯೋತ್ಸವದ ಸಂದರ್ಭದಲ್ಲಿ ತನ್ನ ಕ್ರಾಂತಿಕಾರಿ ಶುಭಾಶಯಗಳನ್ನು ಕಳಿಸಿದೆ.

ಕ್ಯೂಬಾ ಕ್ರಾಂತಿಯು ಲ್ಯಾಟಿನ್ ಅಮೇರಿಕಾದ ಅತ್ಯಂತ ತಿರಸ್ಕೃತ ಸರ್ವಾಧಿಕಾರಿ, ಬ್ಯಾಟಿಸ್ಟಾ ಅಧಿಕಾರದಿಂದ ದೇಶವನ್ನು ಮುಕ್ತಗೊಳಿಸಿದ್ದಲ್ಲದೆ, ಶತಮಾನಗಳಿಂದ ಶೋಷಣೆ, ದಬ್ಬಾಳಿಕೆಗಳಿಗೆ ಒಳಗಾಗಿದ್ದ ಜನತೆಯನ್ನು ದಾಸ್ಯದಿಂದ ಬಿಡುಗಡೆ ಮಾಡಿದರು.

ಮೊದಲಿನಿಂದಲೂ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಹಾಗೂ ಅವರ ಕೈಗೊಂಬೆಗಳಾದ ದಕ್ಷಿಣ ಅಮೇರಿಕಾದ ಪ್ರತಿಗಾಮಿಗಳನ್ನು ಕ್ಯೂಬನ್ ಕ್ರಾಂತಿಕಾರರು ಎದುರಿಸಬೇಕಾಯಿತು. ಸಮಾಜವಾದಿ ಕ್ಯೂಬಾದೇಶ, ಸಾಮ್ರಾಜ್ಯವಾದಿಗಳ ಆರ್ಥಿಕ ದಿಗ್ಬಂಧನೆ, ಒಳ ಪಿತೂರಿಗಳನ್ನು ಮುರಿದು ಸಮಾಜವಾದೀ ಸಮಾಜವನ್ನು ಕಟ್ಟಲು ಮುಂದುವರಿಯುತ್ತಿರುವುದು, ಲ್ಯಾಟಿನ್ ಅಮೇರಿಕನ್ ಹಾಗೂ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಜನಗಳಿಗೆ ಒಂದು ಸ್ಫೂರ್ತಿಯಾಗಿದೆ.

ಅಮೇರಿಕನ್ ಸಾಮ್ರಾಜ್ಯವಾದಿಗಳು ಹಾಗೂ ಪ್ರತಿಗಾಮಿ ಲ್ಯಾಟಿನ್ ಅಮೇರಿಕನ್ ಪ್ರತಿಗಾಮಿಗಳ ತೀವ್ರ ವಿರೋಧವನ್ನು ಎದುರಿಸಿ ಕ್ಯೂಬಾದ ಜನತೆ, ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಕಡಿಮೆ ಅವಧಿಯಲ್ಲಿ ಅಮೋಘ ಪ್ರಗತಿಯನ್ನು ಸಾಧಿಸಿದ್ದಾರೆ. ಈ ಶತಮಾನದ ಅರ್ಧ ಭಾಗದವರೆಗೂ ಕ್ಯೂಬಾದ ಸಂಪನ್ಮೂಲಗಳು ಹಿಡಿಯುಷ್ಟಿದ್ದ ಸಾಮ್ರಾಜ್ಯವಾದಿಗಳು, ಜಮೀನ್ದಾರರು, ಹಾಗೂ ಸ್ಥಳೀಯ ಪ್ರತಿಗಾಮಿಗಳ ಹಿಡಿತದಲ್ಲಿದ್ದವು. ಈ ದಿನ ಜನತೆ ಹಿಂದುಳಿದ ದೇಶವನ್ನು ತೀವ್ರ ಬದಲಾವಣೆಯತ್ತ ತೆಗೆದುಕೊಂಡು ಹೋಗುತ್ತಿದ್ದಾರೆ. ಭದ್ರವಾದ ಸಮಾಜವಾದೀ ಸಮಾಜವನ್ನು ಕಟ್ಟಲು ಅಸ್ತಿಭಾರ ಹಾಕಿದ್ದಾರೆ. ಕೇವಲ ಒಂದೇ ಒಂದು ವಸ್ತು ಸಕ್ಕರೆಯನ್ನು ಉತ್ಪಾದಿಸುವ, ಅದರ ಮೇಲೆಯೇ ಆರ್ಥಿಕವಾಗಿ ಅವಲಂಬಿಸುವ ಪರಿಸ್ಥಿತಿ ಕಳೆದು, ಕ್ಯೂಬಾ ತನ್ನದೇ ಆದ ಕೈಗಾರಿಕೆಗಳನ್ನು ಬೆಳೆಸುತ್ತಿದೆ. ನಿರಕ್ಷರತೆಯನ್ನು ಅಳಿಸಲಾಗಿದೆ, ನಿರುದ್ಯೋಗದ ಹೆಸರೇ ಇಲ್ಲದಾಗಿದೆ. ರಾಷ್ಟ್ರೀಯ ಬಜೆಟ್‌ನ ಬಹುಪಾಲು ಅಂಶವನ್ನು ವಿದ್ಯಾಭ್ಯಾಸ, ಸಾರ್ವಜನಿಕ ಆರೋಗ್ಯ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ವೈಜ್ಞಾನಿಕ ಚಟುವಟಿಕೆಗಳಿಗಾಗಿ ವಿನಿಯೋಗಿಸಲಾಗುತ್ತಿದೆ. ಕ್ಯೂಬಾ ಜನತೆ ಇಂದು ಉಚ್ಚ ಜೀವನ ಮಟ್ಟವನ್ನು ಅನುಭವಿಸುತ್ತಿದ್ದಾರೆ. ವಿವಿಧ ಜನಾಂಗಗಳ ಜನಗಳಿರುವ ಕ್ಯೂಬಾದ ಮತ್ತೊಂದು ವಿಶೇಷತೆಯೆಂದರೆ, ವಿವಿಧ ಜನಾಂಗಗಳ ಜನತೆ ಪರಸ್ಪರ ಅನ್ಯೋನ್ಯತೆಯಿಂದ ಸಮಾನತೆಯಿಂದ ಬದುಕುತ್ತಿದ್ದಾರೆ.

ಕ್ಯೂಬಾ ಸದಾ ಅಮೇರಿಕನ್ ಸಾಮ್ರಾಜ್ಯಶಾಹಿಗಳ ವಿರುದ್ಧ ಎಚ್ಚರಿಕೆ ವಹಿಸಿದೆ. ಅಮೇರಿಕದ ಗಡಿಯಿಂದ ಕೇವಲ ನೂರು ಮೈಲಿಗಳಷ್ಟು ಅಂತರದಲ್ಲಿರುವ ಕ್ಯೂಬಾದ ವಿರುದ್ಧ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಸತತವಾಗಿ ಪಿತೂರಿ ನಡೆಸುತ್ತಲೇ ಇದ್ದಾರೆ. ಈಗಲೂ ಸಾಮ್ರಾಜ್ಯವಾದಿಗಳು ವಿಶ್ವಸಂಸ್ಥೆಯ ಭದ್ರತಾ ಸಮಿತಿಗೆ ಕ್ಯೂಬಾ ಪ್ರವೇಶಿಸುವುದನ್ನು ಅಡ್ಡಿ ಮಾಡುತ್ತಲೇ ಇದ್ದಾರೆ. ಈ ಎಲ್ಲಾ ಅಡ್ಡಿ, ಆತಂಕಗಳನ್ನು ಎದುರಿಸಿ ಕ್ಯೂಬಾ ವಿಮೋಚನಾ ಹೋರಾಟಗಳಿಗೆ ಎಲ್ಲೆಡೆ ಬೆಂಬಲ ಕೊಡುತ್ತಿದೆ. ಅಂಗೋಲಾದಲ್ಲಿ ಸಾಮ್ರಾಜ್ಯಶಾಹಿಗಳ ಕ್ರೂರ ದಬ್ಬಾಳಿಕೆಯ ವಿರುದ್ಧ ಅಲ್ಲಿಯ ಜನತೆಗೆ ಕ್ಯೂಬಾ ನೀಡಿದ ಸಹಾಯವನ್ನು ಎಲ್ಲಾ ಅಲಿಪ್ತ ದೇಶಗಳು ಸ್ವಾಗತಿಸಿವೆ. ವಿಮೋಚನಾ ಹೋರಾಟಗಾರರ ಭುಜಕ್ಕೆ ಭುಜ ಕೊಟ್ಟು ಹೋರಾಟ ಮಾಡುತ್ತಿರುವ ಕ್ಯೂಬಾ ಜನತೆ ಆಫ್ರಿಕಾದ ಹೋರಾಟದಲ್ಲಿ ಅನೇಕ ಪ್ರಾಣತ್ಯಾಗಗಳನ್ನು ಮಾಡಿದ್ದಾರೆ.

ಅಂತರಾಷ್ಟ್ರೀಯ ವ್ಯವಹಾರಗಳಲ್ಲಿ ಹಾಗೂ ಅಲಿಪ್ತ ಚಳುವಳಿಯಲ್ಲಿ ತನ್ನ ಚಟುವಟಿಕೆಗಳಿಂದ ಕ್ಯೂಬಾ ಭಾರತೀಯ ಜನತೆಯ ಅಪಾರ ಬೆಂಬಲವನ್ನು ಪಡೆದಿದೆ. ಬರುವ ವರ್ಷಗಳಲ್ಲಿ ಎರಡೂ ರಾಷ್ಟ್ರಗಳ ಜನತೆಯ ಮಧ್ಯೆ ಸ್ನೇಹ ಸಂಬಂಧಗಳು ಮತ್ತಷ್ಟು ಬಲವಾಗಲಿದೆ.

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕ್ಯೂಬಾದ ಜನತೆ ಮತ್ತು ಕಮ್ಯುನಿಸ್ಟ್ ಪಕ್ಷವನ್ನು ಮತ್ತೊಮ್ಮೆ ಈ ಸಂದರ್ಭದಲ್ಲಿ ಶುಭಾಶಯ ಕೋರುತ್ತಾ, ಬರಲಿರುವ ವರ್ಷಗಳಲ್ಲಿ ಅವರಿಗೆ ಮತ್ತಷ್ಟು ವಿಜಯ ದೊರೆಯಲೆಂದು ಹಾರೈಸಿದ್ದಾರೆ.

●

ಕೇರಳದಲ್ಲಿ ರಾಜಕೀಯ ಶಕ್ತಿಗಳ ಮರು ಹೊಂದಾಣಿಕೆ

[4ನೇ ಪುಟದಿಂದ]

ನಿಸ್ಟ್ ಪಕ್ಷ ಅದರ ನೇತೃತ್ವದಲ್ಲಿದ್ದ ಮಂತ್ರಿಮಂಡಲಕ್ಕೆ ರಾಜೀನಾಮೆ ಕೊಡುವ ದಿಟ್ಟ ಹೆಜ್ಜೆಯನ್ನು ಇಟ್ಟಿತಲ್ಲದೆ, ಆ ಹೆಜ್ಜೆಯ ಉದ್ದೇಶ ಎಡಪಂಥೀಯ ರಾಜಕೀಯ ಶಕ್ತಿಗಳ ಮರುಹೊಂದಾಣಿಕೆಗಾಗಿಯೇ ಎಂದು ಸಾರಿತು. ಕ್ರಾಂತಿಕಾರಿ ಸಮಾಜವಾದಿ ಪಕ್ಷವೂ ಅದನ್ನನುಸರಿಸಿತು.

ಈ ಮರು ಹೊಂದಾಣಿಕೆಯಿಂದ ಕಾಂಗ್ರೆಸ್ ಹೊರಗುಳಿಯಿತು. ಜರೂರು ಪರಿಸ್ಥಿತಿಯಲ್ಲಿ ಸಂಜಯ ಕೂಟದ ವಿರುದ್ಧ ಹೋರಾಡಿದ್ದ ಮತ್ತು ಆಗಿನ ಕಾಂಗ್ರೆಸ್ ಅಧ್ಯಕ್ಷ ಸ್ವರಣ ಸಿಂಗರ, ಇಂದಿರಾ ಪರ ಹೆಜ್ಜೆಯನ್ನು ಪ್ರತಿಭಟಿಸಿದ್ದ ಆಂಟನಿಯವರ ಈ ವರ್ತನೆ ಎಲ್ಲರಿಗೂ ನಿರಾಶೆಯುಂಟುಮಾಡಿತು. ಅವರೂ ಭಾರತ ಕಮ್ಯುನಿಸ್ಟ್ ಪಕ್ಷ ಮತ್ತು ಕ್ರಾಂತಿಕಾರಿ ಸಮಾಜವಾದಿ ಪಕ್ಷಗಳ ಹಾದಿಯನ್ನೇ ತುಳಿಯುವರೆಂದು ಎಲ್ಲರೂ ನಿರೀಕ್ಷಿಸಿದ್ದರು. ಇಂದಿರಾ ಕಾಂಗ್ರೆಸ್ ಮತ್ತು ಜನತಾ ಪಕ್ಷವೆಂಬ ಕರಾಳ ಶಕ್ತಿಗಳೊಂದಿಗೆ ಸೇರಿ ಮೂರನೆ ರಂಗವೊಂದನ್ನು ಸೃಷ್ಟಿಸುವ ಕಾಂಗ್ರೆಸ್ಸಿನ ಈ ನಿರ್ಧಾರ ಅದರ ಸಾಮಾನ್ಯಸದಸ್ಯರಿಗೂ, ಕೇಂದ್ರ ವರಿಷ್ಟ ಮಂಡಳಿಗೂ ತೀವ್ರ ಕಳವಳವನ್ನುಂಟುಮಾಡಿತು.

ಕೊನೆಗೆ ಕೆ. ಪಿ. ಸಿ. ಸಿ. ಯ ನಾಯಕತ್ವಕ್ಕೇ ಪ್ರತಿಗಾಮಿ ಗುಂಪಿನ ಜಾಲಕ್ಕೆ ತಮ್ಮನ್ನು ಎಳೆದೊಯ್ಯುವ ಇಂದಿರಾ ಕಾಂಗ್ರೆಸ್ಸಿನ ಈ ತಂತ್ರದ ಅರಿವಾಗಿ ಅದು ಈ ಸಮಸ್ಯೆಯನ್ನು ಪುನಃ ಆಮೂಲಾಗ್ರವಾಗಿ ಯೋಚಿಸುವಂತೆ ಮಾಡಿತು. ಅದರ ಪರಿಣಾಮವೇ ಕೆ. ಪಿ. ಸಿ. ಸಿ. ಕಾರ್ಯನಿರ್ವಾಹಕದ ಈ ನಿರ್ಧಾರ. ಈ ನಿರ್ಧಾರ ತಡವಾಗಿ ಬಂದುದರಿಂದ ಲೋಕಸಭಾ ಚುನಾವಣೆಗಳೊಂದಿಗೇ ರಾಜ್ಯ ವಿಧಾನಸಭೆಗೂ ಚುನಾವಣೆಗಳು ನಡೆಯುವ ಸಾಧ್ಯತೆ ತಪ್ಪಿತಾದರೂ, ಲೋಕಸಭಾ ಚುನಾವಣೆಯ ಮಟ್ಟಿಗಾದರೂ ಈ ರಾಜಕೀಯ ಪಕ್ಷಗಳ ಐಕ್ಯವನ್ನು ಸಾಧಿಸಿತು. ಮಾರ್ಕ್ಸ್‌ವಾದಿಗಳು ಮೂಲೆಗುಂಪಾದರೆಂದು ಕೊಚ್ಚಿಕೊಳ್ಳುತ್ತಿದ್ದ ಬಂಡವಾಳಶಾಹಿ ಪತ್ರಿಕೆಗಳೇ ಈಗ ಸಹಜವಾಗಿಯೇ ಆಂಟನಿ ಮತ್ತು ಮಾಣಿಯವರಿಗೆ ತಪ್ಪು ಹೆಜ್ಜೆಯಿಡದಂತೆ ಸಲಹೆ ನೀಡಲು ತೊಡಗಿದುವು.

●

ಕಾಂಗೈ ಗೂಂಡಾಗಳಿಂದ ಪ. ಬಂಗಾಳ ನ್ಯಾಯಾಂಗ ಮಂತ್ರಿ ಮೇಲೆ ಹಲ್ಲೆ

ಪ. ಬಂಗಾಳದಲ್ಲಿ ತಮ್ಮ ಸೋಲು ಖಚಿತವೆಂದು ಅರಿತ ಕಾಂಗ್ರೆಸ್ (ಐ) ಬೆಂಬಲಿಗರು ಲೋಕಸಭಾ ಚುನಾವಣಾ ಪ್ರಚಾರದಲ್ಲಿ ನಿರಾಸೆಯಿಂದ ಖತಿಗೊಂಡು ರಾಜ್ಯದ ಕಾನೂನುಮಂತ್ರಿ ಹೆಚ್.ಎ. ಹಲೀಮ್ ಮೇಲೆ ಹಲ್ಲೆ ನಡೆಸಿದ್ದಾರೆ. ಡಿಸೆಂಬರ್ 26ರಂದು ಮಧ್ಯಾಹ್ನ ಕಾಂಗ್ರೆಸ್(ಐ) ಕಡೆಯವರೆಂದು ಗುರುತಿಸಲಾದ ದುಷ್ಕರ್ಮಿಗಳ ಗುಂಪೊಂದು ಕಲ್ಕತ್ತಾ ನಗರದಲ್ಲಿ ಕಾರಿನಲ್ಲಿ ಪ್ರಯಾಣ ಮಾಡುತ್ತಿದ್ದ ಸಚಿವರನ್ನು ಕಾರಿನಿಂದ ಹೊರಗೆಳೆದು ಹೊಡೆದು ಗಾಯಗೊಳಿಸಿದ್ದಾರೆ.

ಸಚಿವರು ಸಿ.ಪಿ ಐ.(ಎಂ) ರಾಜ್ಯ ಸಮಿತಿ ಕಛೇರಿಯಿಂದ ಚುನಾವಣಾ ಪ್ರಚಾರದ ಸಭೆಗೆ ಹೋಗುತ್ತಿದ್ದರು. ಸ್ವತಃ ತಾವೇ ನಡೆಸುತ್ತಿದ್ದ ಕಾರಿನಲ್ಲಿ ಸಚಿವರ ಜೊತೆ ಅವರ ಸ್ನೇಹಿತರೊಬ್ಬರು ಇದ್ದರು.

ಸುಭೋಧ್ ಮಲ್ಲಿಕ್ ಚೌಕದ ಸಂಚಾರಿ ಸಿಗ್ನಲ್ ಬಳಿ ಕಾರು ನಿಂತಾಗ ಅವರನ್ನು ಗುರುತಿಸಿದ ಎಂಟು ಜನರ ಸಮಾಜಘಾತುಕರ ಗುಂಪೊಂದು ಅವಾಚ್ಯ ಶಬ್ದಗಳಿಂದ ಬಯ್ಯುತ್ತಾ ಅವರನ್ನು ಹೊರಕ್ಕೆ ಎಳೆಯಲು ಪ್ರಯತ್ನಿಸಿದರು. ಅವರನ್ನು ಆ ಕ್ಷಣದಲ್ಲಿ ಪ್ರತಿರೋಧಿಸಲು ಸಚಿವರು ಪ್ರಯತ್ನಿಸಿದರು. ಈ ಮಧ್ಯೆ ಕಾರಿನ ಸ್ಟೀರಿಂಗ್ ವೀಲ್ ಮುರಿದು ಹೋಯಿತು.

ಕಾಂಗ್ರೆಸ್ (ಐ) ಗೂಂಡಾಗಳು ಸಚಿವರ ಮುಖಕ್ಕೆ ಬಲವಾಗಿ ಅಪ್ಪಳಿಸಿ ಹೊಡೆದಿರುವುದಲ್ಲದೆ. ಒಂದು ಹಲ್ಲನ್ನು ಮುರಿದಿದ್ದಾರೆ. ಮೂಗಿನಿಂದ ರಕ್ತ ಸುರಿಯುತ್ತಿದ್ದರೂ ದಾಳಿಯನ್ನು ಎದುರಿಸಲು ಸಚಿವರು ಕಾರಿನಿಂದ ಹೊರಬಂದರು. ಜನಗಳು ಘೇರಾಯಿಸಲು ಪ್ರಾರಂಭವಾದ ತಕ್ಷಣ ದುಷ್ಕರ್ಮಿಗಳು ಅಲ್ಲಿಂದ ಓಡಿಹೋದರು. ಗುಂಪಿನಲ್ಲಿದ್ದ ಕನಿಷ್ಟ ಇಬ್ಬರನ್ನು ಸಚಿವರು ಕಾಂಗ್ರೆಸ್ (ಐ) ಬೆಂಬಲಿಗರೆಂದು ಗುರುತಿಸಿದ್ದಾರೆ. ಪೋಲೀಸರು ಆ ಇಬ್ಬರನ್ನು ನಂತರ ದಸ್ತಗಿರಿ ಮಾಡಿದ್ದಾರೆ.

ಸುದ್ದಿ ತಿಳಿದ ಕೂಡಲೇ ತಂಡ, ತಂಡವಾಗಿ ನಗರದ ವಿವಿಧ ಭಾಗಗಳಲ್ಲಿ ಮೆರವಣಿಗೆಗಳನ್ನು ಸಂಘಟಿಸಿ, ಘಟನೆಯನ್ನು ಖಂಡಿಸಲಾಯಿತು ಹಾಗೂ ಇಂತಹ ದುಷ್ಕೃತ್ಯಗಳ ವಿರುದ್ಧ ಕಾಂಗ್ರೆಸ್ (ಐ)ಗೆ ಎಚ್ಚರಿಕೆ ನೀಡಲಾಯಿತು. ಅನೇಕ ಬೀದಿ ಬದಿಯ ಸಭೆಗಳನ್ನು ಏರ್ಪಡಿಸಿ ಗೂಂಡಾಗಿರಿಯ ವಿರುದ್ಧ ಜನತೆ ಪ್ರತಿಭಟಿಸಬೇಕೆಂದು ಕರೆನೀಡಲಾಯಿತು.

ಘಟನೆಯನ್ನು ಖಂಡಿಸಿ ಎಡರಂಗದ ಪಕ್ಷಗಳು ಹೇಳಿಕೆನೀಡಿವೆ. ಸಂಯುಕ್ತ ಹೇಳಿಕೆಯಲ್ಲಿ ಸಿ ಪಿ.ಎಂ.ನ ಕಾಂ. ಪ್ರಮೋದ್ ದಾಸ್‌ಗುಪ್ತ, ಮಖನ್‌ಪಾಲ್ (ಆರ್ ಎಸ್.ಪಿ), ಅಶೋಕ್‌ಘೋಷ್ (ಫಾರ್ವರ್ಡ್‌ಬ್ಲಾಕ್), ಸುಧೀನ್ ಕುಮಾರ್ (ಆರ್.ಸಿ ಪಿ ಐ.) ಸುಹೀರ್ದ್‌ಮಲ್ಲಿಕ್ ಚೌಧರಿ (ಫಾರ್ವರ್ಡ್ ಬ್ಲಾಕ್ ಮಾರ್ಕ್ಸಿಸ್ಟ್) ಮತ್ತು ಅಷೀಶ್ ಭಟ್ಟಾಚಾರ್ಯ (ವಿಪ್ಲವಿ ಬಾಂಗ್ಲಾ ಕಾಂಗ್ರೆಸ್) ಹೇಳಿಕೆಯೊಂದನ್ನು ನೀಡಿ ನ್ಯಾಯಾಂಗ ಮಂತ್ರಿಯ ಮೇಲೆ ನಡೆದಿರುವ ಹಲ್ಲೆ ಕಾಂಗ್ರೆಸ್(ಐ)ನ ನಿಜಸ್ವರೂಪವನ್ನು ಬಯಲುಗೊಳಿಸಿದೆ ಎಂದಿದ್ದಾರೆ. ಚುನಾವಣೆಗಳು ಸಮೀಪಿಸುತ್ತಿರುವಂತೆ ನಿರಾಶರಾದ ಕಾಂಗೈಗಳು ಸಾರ್ವಜನಿಕ ಜೀವನದ ಶಾಂತಿಯನ್ನು ಕೆಡಿಸಲು ಪ್ರಯತ್ನಿಸುತ್ತಿದ್ದಾರೆ. ಕಾಂಗ್ರೆಸ್ (ಐ)ನ ಪ್ರಯತ್ನವನ್ನು ವಿಫಲಗೊಳಿಸಿ, ಹಿಂಸಾಚಾರವನ್ನು ಕೊನೆಗಾಣಿಸಲು ಜನತೆಯನ್ನು ಬೃಹತ್ ಪ್ರಮಾಣದಲ್ಲಿ ಸಂಘಟಿಸಲು ಎಡರಂಗದ ಪಕ್ಷಗಳು ಜನತೆಗೆ ಕರೆನೀಡಿವೆ.

ಪ್ರಜಾಸತ್ತಾತ್ಮಕ ವಕೀಲರ ಸಂಘ ಘಟನೆಯನ್ನು ಖಂಡಿಸಿ, ಸಮಾಜಘಾತುಕ ಶಕ್ತಿಗಳನ್ನು ಸಾರ್ವಜನಿಕ ಜೀವನದಿಂದ ದೂರವಿಡಲು ಕರೆನೀಡಿದೆ.

ನ್ಯಾಯಾಂಗ ಮಂತ್ರಿಗಳ ಮೇಲೆ ಹಲ್ಲೆ ಮಾಡಿರುವುದಲ್ಲದೆ, ಕಾಂಗ್ರೆಸ್ (ಐ) ಕಾರ್ಯಕರ್ತರು ಎಡರಂಗದ

[7ನೇ ಪುಟ ನೋಡಿ]

ಸಫಲ ಹೋರಾಟ, ಮುಷ್ಕರ ಅಂತ್ಯ

ಚಿಕ್ಕಮಗಳೂರು ಜಿಲ್ಲೆ, ಮೂಡಿಗೆರೆ ತಾಲ್ಲೂಕು ಒಣಕಲ್ ಹತ್ತಿರವಿರುವ ದೊಡ್ಡನಂದಿ ತೋಟದ ಮಾಲೀಕರು, ತಾವು ತೋಟ ಮಾಲೀಕರ ಸಂಘಕ್ಕೆ ಸದಸ್ಯರಲ್ಲವಾದ ಕಾರಣ, ಕೈಗಾರಿಕಾವಾರು ಒಪ್ಪಂದದ ಪ್ರಕಾರ ಸಂಬಳ ಕೊಡುವುದು ಸಾಧ್ಯವಿಲ್ಲವೆಂದು ತಿಳಿಸಿದ್ದರು. ದಿನಕ್ಕೆ ಕೇವಲ ರೂ. 6 ಸಂಬಳ ಕೊಡುವುದನ್ನು ಪ್ರತಿಭಟಿಸಲು ತಾ. 25-12-79 ರಿಂದ ತಾ. 5-1-1980ರವರೆಗೆ ಮುಷ್ಕರ ನಡೆಸಿ ದಿನಕ್ಕೆ ರೂ. 7-05 ಪೈಸೆ ಕೂಲಿ ಕೊಡಬೇಕು, ಎರಡು ವರ್ಷ ಕೆಲಸ ಮಾಡಿರುವ ಕಾರ್ಮಿಕರಿಗೆ ತಿಂಗಳಿಗೆ ರೂ. 278 ಸಂಬಳ ಕೊಡಬೇಕು, ಏಪ್ರಿಲ್ 1 79 ರಿಂದ ಸೆಪ್ಟಂಬರ್ 1979ರವರೆಗೆ 75 ಪೈಸೆಯಂತೆ ಹಾಗೂ 1-10-79 ರಿಂದ 31-12-79ರವರೆಗೆ ರೂ. 1-05 ಪೈಸೆಯಂತೆ ಹೆಚ್ಚುವರಿ ಮಾಡಿದ ಹಿಂದಿನ ವೇತನವನ್ನು ಫೆಬ್ರವರಿ 20ನೇ ತಾರೀಖಿನ ಒಳಗಾಗಿ ಕೊಡಬೇಕು ಎಂದು ಒಪ್ಪಂದವಾಯಿತು. ಕಾರ್ಮಿಕರ ಪರವಾಗಿ ಒಂಪ್ಪಂದಕ್ಕೆ ಕಾಂ. ಎ. ಸಿ. ಕೇಶವ ಹಾಗೂ ಕಾಂ. ಎ. ಕೆ. ವಿಶ್ವನಾಥ್ ಒಪ್ಪಂದಕ್ಕೆ ಸಹಿ ಹಾಕಿದರು.

6-1-1980 ರಿಂದ ತೋಟಕಾರ್ಮಿಕರು ಕೆಲಸಕ್ಕೆ ಹಾಜರಾಗಿದ್ದಾರೆ. ○

ಜೆ.ವಿ. ಸ್ಟಾಲಿನ್ ಜನ್ಮ ಶತಾಬ್ದಿಯ ಸ್ಮರಣೆ

[2ನೇ ಪುಟದಿಂದ]

ಅತ್ಯಂತ ಹೀನಾಯ ಸೋಲು. ಇದರ ಪರಿಣಾಮವಾಗಿ ಯುದ್ಧದ ನಂತರ ಹಲವಾರು ಸಮಾಜವಾದಿ ರಾಷ್ಟ್ರಗಳು ಭೂಪಟದಲ್ಲಿ ಕಾಣಿಸಿಕೊಂಡವು. ವಸಾಹತುಗಳಾಗಿದ್ದ ಅನೇಕ ರಾಷ್ಟ್ರಗಳು ಸ್ವಾತಂತ್ರ್ಯ ಪಡೆದವು, ಇನ್ನೂ ಹಲವು ರಾಷ್ಟ್ರಗಳ ರಾಷ್ಟ್ರೀಯ ವಿಮೋಚನಾ ಚಳುವಳಿಗೆ ಪುಟ ದೊರೆಯಿತು.

ಸೋವಿಯೆತ್ ಒಕ್ಕೂಟದ ಮತ್ತು ಜಾಗತಿಕ ಕಮ್ಯುನಿಸ್ಟ್ ಚಳುವಳಿಯ ಶ್ರೇಷ್ಠ ಮುಂದಾಳಾಗಿ ಸ್ಟಾಲಿನ್ನರ ಮಹತ್ಸಾಧನೆಗಳನ್ನು ಈ ರೀತಿ ಗುರುತಿಸಿಕೊಳ್ಳಬಹುದು. ಜಗತ್ತಿನಾದ್ಯಂತ ಕಾರ್ಮಿಕ ವರ್ಗ ಮತ್ತು ಅದರ ಮಿತ್ರರು ಎದುರಿಸಿದ ಸವಾಲುಗಳನ್ನು ಲೆನಿನ್ನರ ಗೈರುಹಾಜರಿಯಲ್ಲಿ ಸ್ಟಾಲಿನ್ ಸಮರ್ಥವಾಗಿ ಎದುರಿಸಿದರು. ಸ್ಟಾಲಿನ್, ಲೆನಿನ್ನರ ಅತ್ಯಂತ ವಿಧೇಯ ಉತ್ತರಾಧಿಕಾರಿ ಮತ್ತು ಲೆನಿನ್‌ವಾದದ ಉತ್ಕಟ ಪ್ರತಿಪಾದಕರೇ ಹೊರತು ಲೆನಿನ್ ಅವರ ಅಂಧ ಅನುಯಾಯಿಯಲ್ಲ. ಸ್ಟಾಲಿನ್ ಲೆನಿನ್ನರ ಸಿದ್ಧಾಂತಗಳ ಸತ್ವವನ್ನು ಲೆನಿನ್‌ವಾದದ ನಿಜವಾದ ಅರ್ಥದಲ್ಲಿ ಗ್ರಹಿಸಿ ಅದನ್ನು ಕಾಲ ಮತ್ತು ಪರಿಸ್ಥಿತಿಗಳ ಅವಶ್ಯಕತೆಗೆ ತಕ್ಕಂತೆ ಬಳಸಿಕೊಂಡರು.

ಲೋಪದೋಷಗಳು :

ಸ್ಟಾಲಿನ್ ಜೀವನ ಮತ್ತು ಅದರ ಕಾರ್ಯವಿಧಾನಗಳಲ್ಲಿನ ಲೋಪದೋಷಗಳನ್ನು ನಾವು ಈ ಹಿನ್ನೆಲೆಯಲ್ಲಿ ಅರ್ಥೈಸಿಕೊಳ್ಳಬೇಕಾಗಿದೆ. ತನ್ನ ಜೀವಿತದ ಕೊನೆಯ ಭಾಗದಲ್ಲಿ ಸ್ಟಾಲಿನ್ ತಾನು ನೇತೃತ್ವ ವಹಿಸಿದ್ದ ಸಾಮೂಹಿತ ಮುಂದಾಳತ್ವ ಸಾಧಿಸಿದ್ದ ಎಲ್ಲ ಸಾಧನೆಗಳ ಕೀರ್ತಿಗೆ ತಾನೇ ಕಾರಣವೆನ್ನುವಂತಹ ವರ್ತನೆ ತೋರಿಸಿದರು. ಇದನ್ನು ಸ್ಟಾಲಿನ್ನರ ಉತ್ಕಟ ಅಭಿಮಾನಿಗಳೂ ಅಲ್ಲಗಳೆಯುವಂತಿಲ್ಲ. ಸ್ಟಾಲಿನ್ನರ ಜೀವನದ ಆರಂಭದ ಭಾಗದಲ್ಲಿ ಅವರುಗಳಿಸಿದ ಯಶಸ್ಸಿಗೆ ಅವರು ಸಾಮೂಹಿಕಮುಂದಾಳುತ್ವ ಬೆಳೆಸುವಲ್ಲಿ ವಿಶೇಷ ಆಸ್ಥೆ ವಹಿಸಿದುದೇ ಕಾರಣ. ನಾಯಕನಾಗಿ ತಂಡವನ್ನು ಒಂದುಗೂಡಿಸುವಲ್ಲಿ ಸ್ಟಾಲಿನ್‌ಗೆ ಇದ್ದ ವಿಶೇಷ ಪರಿಣತಿಯೇ ಅವರ ಹಿರಿಮೆ. ಆದರೆ ತನ್ನ ಜೀವನದ ಕಡೆಯ ಭಾಗದಲ್ಲಿ ಸ್ಟಾಲಿನ್ ಈ ಮಹತ್ವದ ಅಂಶವನ್ನೇ ಮರೆತರು. ಸಾಮೂಹಿಕ ಮುಂದಾಳುತ್ವದ ಎಲ್ಲಾ ಸಾಧನೆಗಳಿಗೂ ತಾನೇ ಕಾರಣವೆನ್ನುವ ವರ್ತನೆಯನ್ನು ಅವರು ತೋರಿಸಲಾರಂಭಿಸಿದರು. ಈ ತಪ್ಪಿಗೆ ಸ್ಟಾಲಿನ್ ಸ್ವತಃ ಹೊಣೆಗಾರರೆನ್ನುವುದರಲ್ಲಿ ಸಂಶಯವಿಲ್ಲ. ಆದರೂ ಸೋವಿಯೆತ್ ಒಕ್ಕೂಟದ ಮತ್ತು ಜಗತ್ತಿನ ಇತರ ಮುಂದಾಳುಗಳೂ ಇದರಲ್ಲಿ ಪಾಲುದಾರರಾಗಿದ್ದಾರೆ. ಮುಂದಾಳುತ್ವದಲ್ಲಿ ಒಡಕುಂಟಾಗುವುದನ್ನು ತಪ್ಪಿಸುವ ಪ್ರಾಮಾಣಿಕ, ಆದರೆ ಕಮ್ಯುನಿಸ್ಟ್ ಸಿದ್ಧಾಂತಕ್ಕೆ ವಿರುದ್ಧವಾಗಿರುವ ಉದ್ದೇಶದಿಂದಲೋ ಅಥವಾ 'ನಮಗ್ಯಾಕೆ ಉಸಾಬರಿ' ಎನ್ನುವ ಧೋರಣೆಯಿಂದಲೋ ಸೋವಿಯತ್ ಕಮ್ಯುನಿಸ್ಟ್ ಪಕ್ಷದ ಮತ್ತು ಜಗತ್ತಿನ ಇತರ ಕಮ್ಯುನಿಸ್ಟ್ ಪಕ್ಷಗಳ ಹಲವು ಮುಂದಾಳುಗಳು ಸ್ಟಾಲಿನ್ನರ ಜೀವಿತಾವಧಿಯಲ್ಲಿ ಅವರ ಹೊಗಳುಭಟರಾಗಿದ್ದರು. ಆದರೆ ಇದೇ ಮಂದಿ ಸ್ಟಾಲಿನ್ ಮರಣಾನಂತರ ಅವರ ಕಟು ಟೀಕಾಕಾರರಾಗಿಬಿಟ್ಟರು. ಇದು ಕ್ರುಶ್ಚಾಫ್ ಮತ್ತು ಅವರ ಕೆಲವರು ಸಂಗಾತಿಗಳಿಗೂ ಅನ್ವಯಿಸುತ್ತದೆ ಮತ್ತು ಇದು ಅವರ ಅಪರಾಧವನ್ನು ಇನ್ನಷ್ಟು ಗಂಭೀರಗೊಳಿಸಿದೆ.

ನಾವು ಕಲಿಯಬೇಕಾದುದೇನು ? :

ಇದು ಕೇವಲ ಸ್ಟಾಲಿನ್ನರ ವ್ಯಕ್ತಿತ್ವಕ್ಕೆ ಸೀಮಿತವಾದ ಪ್ರಶ್ನೆಯಲ್ಲ. ಮೊದಲು ಸ್ಟಾಲಿನ್ನರ ವೈಯಕ್ತಿಕ ಪ್ರತಿಷ್ಠೆಯನ್ನು ಬೆಳೆಯುವಂತೆ ಮಾಡಿ ಆ ಬಳಿಕ ಅದನ್ನು ಟೀಕಿಸಿದುದು- ಇವೆರಡರಿಂದಲೂ ನಮ್ಮ ದೇಶದ ಕಮ್ಯುನಿಸ್ಟ್ ಚಳುವಳಿಯನ್ನೊಳಗೊಂಡು ಜಗತ್ತಿನ ಎಲ್ಲ ಕ್ರಾಂತಿಕಾರಿ ಕಾರ್ಮಿಕವರ್ಗದ ಚಳುವಳಿಯೂ ಪಾಠ ಕಲಿಯಬೇಕಾಗಿದೆ. ವಿಶ್ವದ ಎಲ್ಲ ಕಮ್ಯುನಿಸ್ಟ್ ಪಕ್ಷಗಳಂತೆ ಭಾರತದ ಕಮ್ಯುನಿಸ್ಟ್ ಚಳುವಳಿಯೂ ಸ್ಟಾಲಿನ್ನರ ಕಾಲದಲ್ಲೇ ಬೆಳೆದು ಬಂದಿದೆ. ಮಾರ್ಕ್ಸ್‌ವಾದ-ಲೆನಿನ್‌ವಾದದ ಪ್ರಗತಿಗೆ ಸ್ಟಾಲಿನ್ ನೀಡಿದ ಅಮೋಘ ಕೊಡುಗೆಯಿಂದ ಭಾರತದ ಕಮ್ಯುನಿಸ್ಟ್ ಚಳುವಳಿ ಪ್ರಯೋಜನ ಪಡೆದಿರುವಂತೆ 'ಸ್ಟಾಲಿನ್ ವ್ಯಕ್ತಿಪೂಜೆ'ಯೆಂದು ಇದೀಗ ಕರೆಸಿಕೊಳ್ಳಲ್ಪಡುತ್ತಿರುವ ಅಭ್ಯಾಸಗಳನ್ನೂ ಅದು ತನ್ನೊಳಗೆ ರೂಢಿಸಿಕೊಂಡಿದೆ. ಕಾರ್ಯದರ್ಶಿ ಮಂಡಳಿಯ ಸ್ಥಾನದಲ್ಲಿ ಕಾರ್ಯದರ್ಶಿಯೊಬ್ಬನೇ ನಿರ್ಧಾರಗಳನ್ನು ಕೈಗೊಳ್ಳುವುದು, ವಿಸ್ತೃತ ಸಮಿತಿಯೊಂದರ ಸ್ಥಾನದಲ್ಲಿ ಔಪಚಾರಿಕವಾದ ಕ್ರಿಯಾ ಸಮಿತಿಗಳು ನಿರ್ಣಯಗಳನ್ನು ತೆಗೆದುಕೊಳ್ಳುವುದು ಇತ್ಯಾದಿಗಳಿಗೆಲ್ಲ ಆಯಾ ಸ್ಥಾನಗಳಲ್ಲಿರುವ ವ್ಯಕ್ತಿಗಳು ಕಾರಣವಲ್ಲ; ಅದಕ್ಕೆ ಸ್ಟಾಲಿನ್ನರ ವ್ಯಕ್ತಿಪೂಜೆಯ ಅವಧಿಯಲ್ಲಿ ಕಮ್ಯುನಿಸ್ಟ್ ಪಕ್ಷ ಬೆಳೆದು ಬಂದ ವಾತಾವರಣವೇ ಕಾರಣ. ಹಾಗಾಗಿ ಸ್ಟಾಲಿನ್ನರ ಮಹತ್ಸಾಧನೆಗಳ ಪ್ರಯೋಜನ ಪಡೆಯುವುದರೊಂದಿಗೇ ಆ ಕಾಲದಲ್ಲಾದ ಪ್ರಮಾದಗಳ ಪುನರಾವರ್ತನೆಯಾಗದಂತೆ ನೋಡಿಕೊಳ್ಳುವುದೇ ಸ್ಟಾಲಿನ್ ಜೀವನದಿಂದ ನಾವು ಕಲಿಯಬೇಕಾದ ಪಾಠ.

●

ನ್ಯಾಯಾಂಗ ಮಂತ್ರಿ ಮೇಲೆ ಹಲ್ಲೆ

[6ನೇ ಪುಟದಿಂದ]

ಸಭೆಗಳು ಹಾಗೂ ಮೆರವಣಿಗೆಗಳ ಮೇಲೆ ಧಾಳಿ ನಡೆಸಿದ್ದಾರೆ.

ಡಿಸೆಂಬರ್ 20 ರಂದು ನಿಮಾಯಿ ಪ್ರಮಾಣಿಕ್ ಸಿ. ಪಿ. ಐ. (ಎಂ) ಕಾರ್ಯಕರ್ತನನ್ನು ಕಾಂಗ್ರೆಸ್ (ಐ) ಕೃಪಾಪೋಷಿತ ಸಮಾಜಘಾತುಕ ಶಕ್ತಿಗಳು 24 ಪರಗಣ ಜಿಲ್ಲೆಯ ನೃಹಾತಿಯಿಂದ ಅಪಹರಿಸಲಾಯಿತು. ಕೆಲವು ದಿನಗಳ ನಂತರ ನಿಮಾಯಿ ಪ್ರಮಾಣಿಕ್ ಶವ ಮಾತ್ರ ಸಿಕ್ಕಿತು ಅಲ್ಲದೆ ಹಲವಾರು ಸಿ. ಪಿ. ಐ. (ಎಂ) ಮತ್ತು ಇತರ ಎಡಪಕ್ಷಗಳ ಕಾರ್ಯಕರ್ತರು ಕಾಂಗ್ರೆಸ್ (ಐ) ಕಾರ್ಯಕರ್ತರಿಂದ ಗಾಯಗೊಂಡಿದ್ದಾರೆ.

ಕಾಂ. ಹೆಚ್. ಎ. ಹಲೀಂರವರ ಮೇಲೆ ನಡೆದ ಹಲ್ಲೆ ಪೂರ್ವಯೋಜಿತವಾದದ್ದು ಹಾಗೂ ಕಾಂಗ್ರೆಸ್ (ಐ) ನಾಯಕರಿಂದ ಪ್ರೇರಿತವಾದದ್ದು ಎಂಬುದು ಈಗ ಸ್ಪಷ್ಟವಾಗಿದೆ. ವಿಚಿತ್ರವೆಂದರೆ ಇದೇ ಕಾಂಗ್ರೆಸ್ (ಐ). ರಾಜ್ಯದಲ್ಲಿ ಶಾಂತಿಪಾಲನೆಯ ಬಗ್ಗೆ ಬೊಬ್ಬೆ ಹೊಡೆಯುತ್ತಿದೆ.

ವಾಸ್ತವಿಕತೆ ಎಂದರೆ ರಾಜ್ಯದಲ್ಲಿ ಕಾಂಗ್ರೆಸ್(ಐ)ನಿಂತ ನೆಲ ಕುಸಿಯುತ್ತಿದೆ ಲೋಕಸಭಾ ಚುನಾವಣೆಗಳಲ್ಲಿ ಅದು ಸಂಪೂರ್ಣ ಪರಾಭವದತ್ತ ನಡೆಯುತ್ತಿದೆ. ಇದು ದುರ್ಬಲ ವರ್ಗಗಳಲ್ಲಿ ಆಸೆ, ಉತ್ಸಾಹಗಳನ್ನು ಉಂಟುಮಾಡಿವೆ. ನಿರಾಶೆಯಿಂದ ಕಾಂಗ್ರೆಸ್ (ಐ) ದುಃಸ್ವಪ್ನವನ್ನು ಸಹಿಸದೆ ಹಿಂಸಾಚಾರಕ್ಕೆ ಇಳಿದಿದೆ. ●

ಕಟ್ಟಿಗೆ ಬೆಲೆ ಏರಿಕೆ ವಿರುದ್ಧ ಪ್ರತಿಭಟನೆ

ಉ. ಕ. ಜಿಲ್ಲೆಯ ದಾಂಡೇಲಿಯ ಸರಕಾರಿ ಅರಣ್ಯ ಇಲಾಖೆಯವರು ಉರುವಲು ಕಟ್ಟಿಗೆಯ ಬೆಲೆಯನ್ನು ಒಂದು ಕ್ವಿಂಟಾಲ್‌ಗೆ ರೂ. 4-60 ಪೈಸೆಯಿಂದ ರೂ. 8-60 ಪೈಸೆಗೆ ಏರಿಸಿದ್ದಾರೆ. ಇದನ್ನು ಪ್ರತಿಭಟಿಸಲು ತಾ. 5-1-80 ರಂದು ಸ್ಥಳೀಯ ಸಿ. ಪಿ. ಐ. (ಎಂ) ಮತ್ತು ಸಿ. ಐ. ಟಿ. ಯು. ಶಾಖೆಗಳು ನಗರದಲ್ಲಿ ಬೃಹತ್ ಮೆರವಣಿಗೆಯನ್ನು ಏರ್ಪಡಿಸಿದ್ದವು. ರೈತ, ಕಾರ್ಮಿಕರು, ಮುದುಕರು, ಮಕ್ಕಳು, ಮಹಿಳೆಯರು ಕೆಂಪು ಬಾವುಟಗಳನ್ನು ಹಿಡಿದು, ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆ ರೀಜನಲ್ ಫಾರೆಸ್ಟ್ ಆಫೀಸ್ ಕಡೆಗೆ ಸಾಗಿತು.

ಫಾರೆಸ್ಟ್ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ ನಂತರ, ಸಮೀಪದ ಮೈದಾನದಲ್ಲಿ ಬಹಿರಂಗ ಸಭೆ ನಡೆಯಿತು ಕಟ್ಟಿಗೆಯ ಬೆಲೆ ಇಳಿಸದಿದ್ದರೆ, ತೀವ್ರ ಹೋರಾಟ ನಡೆಸಬೇಕಾಗುವುದೆಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ ಕಾಂ. ಜಿ. ವಿ. ಪವಾರ್‌ರವರು ಮುಂದಿನ ಹೋರಾಟಕ್ಕೆ ಸಿದ್ಧರಾಗಲು ಜನತೆಗೆ ಕರೆಯಿತ್ತರು. ಚಪ್ಪಾಳೆ ತಟ್ಟುವುದರ ಮೂಲಕ ನೆರೆದಿದ್ದ ಜನಸಮೂಹ ಚಳುವಳಿಯನ್ನು ಮುಂದುವರಿಸಲು ಒಪ್ಪಿಗೆ ನೀಡಿದರು. ಧನ್ಯವಾದಗಳೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

○

ಹಳೆ ವಿದ್ಯಾರ್ಥಿ ಸಂಘದ ಮಹಾಸಭೆ

ದ. ಕ. ಜಿಲ್ಲೆ, ಕುಂದಾಪುರ ತಾಲ್ಲೂಕು ಆನಗಳ್ಳಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಹಳೆ ವಿದ್ಯಾರ್ಥಿ ಸಂಘದ ಮಹಾಸಭೆಯು ಡಿಸೆಂಬರ್ 23ರಂದು ಮುಖ್ಯೋಪಾಧ್ಯಾಯಶ್ರೀ ಎಸ್. ಕೇಶವಗಾಣಿಗರ ಅಧ್ಯಕ್ಷತೆಯಲ್ಲಿ ಜರುಗಿತು. ಸಂಘದ ಕಾರ್ಯದರ್ಶಿ ಶ್ರೀ ಎಸ್. ಪರಮೇಶ್ವರ ಆಚಾರ್ ಅವರು ಮಂಡಿಸಿದ ವಾರ್ಷಿಕ ಲೆಕ್ಕಪತ್ರವನ್ನು ಸರ್ವಾನುಮತದಿಂದ ಮಂಜೂರು ಮಾಡಲಾಯಿತು.

1980-81ರ ಸಾಲಿನ ಸಲಹಾ ಸಮಿತಿಗೆ ಶ್ರೀಗಳಾದ ಎಸ್. ಗಣಪಯ್ಯ ಶೆಟ್ಟಿ (ಕಂಟ್ರಾಕ್ಟರ್) ಎ. ರಿಚ್ಚರ್ಡ್ ರೆಬೆಲ್ಲೊ ಎಂ. ಕಾಂ., (ಲೆಕ್ಚರರ್) ಕುಮಾರಿ ವಿನ್ನಿ ಡಿ'ಸೋಜ (ಟೀಚರ್) ಇವರನ್ನು ನೇಮಿಸಲಾಯಿತು.

ಕಾರ್ಯಕಾರಿ ಸಮಿತಿಗೆ ಶ್ರೀಗಳಾದ ಎ. ಸುಖಾನಂದ ಶೆಟ್ಟಿ (ಅಧ್ಯಕ್ಷ) ಕುಮಾರಿ ಎ. ಗೀತಾ ಹೆಬ್ಬಾರ, ಎ. ಭುಜಂಗಶೆಟ್ಟಿ ಎ. ಗೋವಿಂದ ಬಿಲ್ಲವ (ಉಪಾಧ್ಯಕ್ಷರುಗಳು) ಎ. ಪರಮೇಶ್ವರ ಆಚಾರ್ (ಪ್ರಧಾನ ಕಾರ್ಯದರ್ಶಿ) ಎ. ಗೋಪಾಲ ಗಾಣಿಗ, ಕುಮಾರಿ ಎ. ಸುಮತಿ ಶೆಟ್ಟಿ (ಜತೆ ಕಾರ್ಯದರ್ಶಿಗಳು), ಎ. ಸುರೇಂದ್ರನಾಥ ಶೆಟ್ಟಿ (ಕೋಶಾಧಿಕಾರಿ) ಎ. ಶ್ರೀನಿವಾಸ ಶೆಟ್ಟಿ (ಲೆಕ್ಕ ಪರಿಶೋಧಕ).

ಸಹಾಯಕ ಸಮಿತಿಯ ಸದಸ್ಯರುಗಳಾದ ಶ್ರೀಗಳಾದ ಎ. ಗೋವಿಂದ ಮೊಗವೀರ, ಸವಿತಾಶೆಟ್ಟಿ, ಎ. ಬಾಲಕೃಷ್ಣ ಶೆಟ್ಟಿ ಎ. ವಿನೋದ ಹೆಬ್ಬಾರ, ಎ. ಭಾಸ್ಕರ ಶೆಟ್ಟಿ, ಎ. ವಿಜಯಶೆಟ್ಟಿ, ದೇವಪ್ಪ ಪೂಜಾರಿ, ಎ. ರಾಮಪೂಜಾರಿ, ಇಂದಿರಾ ಶೆಟ್ಟಿ, ಎ. ಬಾಲಹರಿಜನ, ನಾಗರತ್ನ ಹೆಬ್ಬಾರ, ಶಂಕರ ಬಿಲ್ಲವ, ಜಯಲಕ್ಷ್ಮಿ ಹೆಬ್ಬಾರ, ಬಾಬು ಬಿಲ್ಲವ, ಕಾರ್ಯದರ್ಶಿ ಶ್ರೀ ಪರಮೇಶ್ವರ ಆಚಾರ್ ವಂದಿಸಿದರು.

○

6 ತಿಂಗಳಿಂದ ಮುಷ್ಕರದಲ್ಲಿರುವ ಕಾರ್ಮಿಕರು

ಪ. ಬಂಗಾಳದ ಕಮರ್‌ಹಾಟಿಯಲ್ಲಿರುವ ಇಂಡಿಯಾ ಫಾಯಿಲ್ಸ್ ಲಿಮಿಟೆಡ್‌ನ ಸುಮಾರು ಒಂದು ಸಾವಿರ ಕಾರ್ಮಿಕರು 11ನೇ ಜೂನ್ 1979ರಿಂದ ಮುಷ್ಕರದಲ್ಲಿದ್ದಾರೆ. ಇಂಡಿಯಾ ಫಾಯಿಲ್ಸ್ ಕಾರ್ಖಾನೆ, ಬ್ರಿಟೀಷ್ ಅಲ್ಯೂಮಿನಿಯಂ ಮತ್ತು ಬಾಕೋಫೈಲ್ಸ್ ಆಫ್ ಯುನೈಟೆಡ್ ಕಿಂಗ್‌ಡಂ ಕಂಪನಿಗಳ ಸಹಾಯಕ ಕಾರ್ಖಾನೆಯಾಗಿದೆ.

ಕಾರ್ಮಿಕರು ಕೇವಲ ನ್ಯಾಯಬದ್ಧ ವೇತನ ಏರಿಕೆ, 1976ರಲ್ಲಿ ವಜಾ ಆದ ನೂರಕ್ಕೂ ಹೆಚ್ಚು ಕಾರ್ಮಿಕರ ಪುನರ್‌ನೇಮಕ, ತುರ್ತು ಪರಿಸ್ಥಿತಿಯಲ್ಲಿ ರದ್ದುಗೊಳಿಸಲ್ಪಟ್ಟ ವಿಶೇಷ ರಜಾ ಮತ್ತಿತರ ಸೌಲಭ್ಯಗಳನ್ನು ವಾಪಸ್ಸು ಕೊಡಬೇಕು, ಖಾಲಿಯಾದ ಹುದ್ದೆಗಳನ್ನು ಭರ್ತಿ ಮಾಡುವುದು, ಯಾಂತ್ರೀಕರಣದ ಮೂಲಕ ಕೆಲಸಗಾರರು ಹೆಚ್ಚಾಗಿದ್ದಾರೆ ಎಂದು ತೋರಿಸಿರುವುದು ಮುಂತಾದ ಬೇಡಿಕೆಗಳನ್ನು ಮುಂದಿಟ್ಟು ಮುಷ್ಕರ ನಡೆಸುತ್ತಿದ್ದಾರೆ.

ಜನವರಿ 1978ರಂದು ಬೇಡಿಕೆಗಳ ಪಟ್ಟಿಯನ್ನು ಆಡಳಿತ ವರ್ಗಕ್ಕೆ ಕಳಿಸಿದ ಕಾರ್ಮಿಕರು, ತಮ್ಮ ಬೇಡಿಕೆಗಳಿಗೆ ಒಳ್ಳೆಯ ಪ್ರತಿಕ್ರಿಯೆಯನ್ನು ನಿರೀಕ್ಷಿಸಿ ಅನೇಕ ದಿನಗಳ ತನಕ ಕಾದುನೋಡಿದರು. ಕಾರ್ಮಿಕ ಮಂತ್ರಿಗಳು ಹಾಗೂ ಕಾರ್ಮಿಕ ಡೈರೆಕ್ಟೋರೇಟ್ ಕಂಪನಿಯ ಆಡಳಿತ ವರ್ಗದ ಮನವೊಲಿಸಿ ಒಂದು ಒಪ್ಪಂದಕ್ಕೆ ಬರುವಂತೆ ಮಾಡಿದ ಪ್ರಯತ್ನಗಳು ಆಡಳಿತ ವರ್ಗದ ಹಟಮಾರಿತನದಿಂದ ವಿಫಲವಾಯಿತು. ಆದ್ದರಿಂದ ಕಾರ್ಮಿಕರು ಬೇರೆ ಯಾವುದೇ ಮಾರ್ಗವಿಲ್ಲದೆ ಮುಷ್ಕರಕ್ಕಿಳಿಯಬೇಕಾಯಿತು. ಈಗ ಮುಷ್ಕರ ಆರು ತಿಂಗಳಿಗೆ ಕಾಲಿಟ್ಟಿದೆ. ಫೆಡರೇಶನ್ ಆಫ್ ಮೆಟಲ್ ಅಂಡ್ ಇಂಜಿನಿಯರಿಂಗ್ ವರ್ಕರ್ಸ್ ಯೂನಿಯನ್ನಿನ ಅಧ್ಯಕ್ಷ ರಾಬಿನ್ ಮುಖರ್ಜಿ ಮತ್ತು ಕಾರ್ಯದರ್ಶಿ ಶಾಂತಿಘಟಕ್ ಇಂಡಿಯಾ ಫಾಯಿಲ್ಸ್ ಲಿಮಿಟೆಡ್ ಕಾರ್ಮಿಕರ ಹೋರಾಟಕ್ಕೆ ಸಂಪೂರ್ಣ ಬೆಂಬಲ ನೀಡಿರುವುದಲ್ಲದೆ, ದುಡಿಯುವವರ ನ್ಯಾಯಬದ್ಧ ಬೇಡಿಕೆಗಳನ್ನು ಈಡೇರಿಸದೆ ಉದ್ದೇಶಪೂರ್ವಕವಾಗಿ ಕಾರ್ಮಿಕರನ್ನು ಉಪವಾಸ ಕೆಡವುದರ ಮೂಲಕ ಸಂಘಟನೆಯನ್ನು ಮುರಿಯುವುದಕ್ಕೆ ಪ್ರಯತ್ನಿಸುತ್ತಿರುವ ಆಡಳಿತ ವರ್ಗದ ಕುತಂತ್ರವನ್ನು ಖಂಡಿಸಿದ್ದಾರೆ.

ತ್ರಿಪುರಾ ಎಡರಂಗ ಸರಕಾರದ ಎರಡು ವರ್ಷಗಳು

[ಒಂದನೇ ಪುಟದಿಂದ]

ಸಮಾಜವನ್ನು ಕಟ್ಟಬಲ್ಲವು ಎಂಬುದನ್ನೂ ಮನಗಂಡಿದ್ದಾರೆ.

ಆಸಕ್ತ ಹಿತಾಸಕ್ತಿಗಳ ಛಿದ್ರಕಾರಿ ಚಟುವಟಿಕೆಗಳು, ಕೇಂದ್ರ ಸರಕಾರವನ್ನೇ ಅವಲಂಬಿಸಬೇಕಾದ ಪರಿಸ್ಥಿತಿ, ಪರಿಮಿತ ಅಧಿಕಾರದಲ್ಲಿಯೇ ಈ ಹಿಂದುಳಿದ ರಾಜ್ಯವನ್ನು ಎಚ್ಚೆತ್ತ ಸಮೃದ್ಧ ರಾಜ್ಯವನ್ನಾಗಿ ಮಾಡಲು ಎಡರಂಗ ಸರಕಾರ ನಿರ್ಧರಿಸಿದೆ.

ಹಿಂದೆ ಭೂಮಿ ಕೆಲವೇ ಮಂದಿಗಳ ಕೈಯಲ್ಲಿ ಇದ್ದದ್ದರಿಂದ ಭೂಹೀನರ ಸಂಖ್ಯೆ ಹೆಚ್ಚಾಗುತ್ತಲೇ ಇತ್ತು. ರಾಜ್ಯದಲ್ಲಿ ಕೃಷಿ ಕಾರ್ಮಿಕರು, ದಿನಗೂಲಿಗಳು ಹಾಗೂ ಕಾರ್ಖಾನೆಗಳಲ್ಲಿ ದುಡಿಯುವ ಕಾರ್ಮಿಕರ ಸಂಖ್ಯೆ ಆರು ಲಕ್ಷ. ಎಡರಂಗ ಸರಕಾರ ಚುನಾವಣಾ ಸಮಯದಲ್ಲಿ ಕಾರ್ಮಿಕ ವರ್ಗಕ್ಕೆ ನೀಡಿದ ಭರವಸೆಯನ್ನು ಜಾರಿಮಾಡಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿದೆ.

ವೇತನ:

ಟೀ ತೋಟಗಳಲ್ಲಿ ದುಡಿಯುವ ಕಾರ್ಮಿಕರು (ಗಂಡಸರು-ಹೆಂಗಸರು) ವೇತನ ಹೆಚ್ಚಳವನ್ನು ಪಡೆದಿರುವುದಲ್ಲದೆ, ಮನೆ, ಊಟ, ಕುಡಿಯುವ ನೀರಿನ ಸೌಲಭ್ಯಗಳನ್ನೂ ನೀಡಲಾಗಿದೆ. ಇದರಿಂದ ಟೀ ಮತ್ತು ರಬ್ಬರ್ ತೋಟಗಳಲ್ಲಿ ದುಡಿಯುವ 1,72,000ಕ್ಕೂ ಹೆಚ್ಚು ಕಾರ್ಮಿಕರಿಗೆ ಲಾಭವಾಗಿದೆ.

ಸಂಘಟಿತ ಕಾರ್ಮಿಕರ ವೇತನ ವಿಮರ್ಶೆಗಾಗಿ ನೇಮಿಸಿದ ಸಮಿತಿ ತನ್ನ ವರದಿ ಇನ್ನೂ ಸಲ್ಲಿಸಿಲ್ಲದಿದ್ದರೂ, ಸರಕಾರ ಎಲ್ಲಾ ಕ್ಷೇತ್ರಗಳಲ್ಲಿ ದುಡಿಯುವ ಕಾರ್ಮಿಕರ ವೇತನಗಳನ್ನು ಹೆಚ್ಚಿಸಿದೆ. ಹಿಂದಿನ ಸರಕಾರಗಳ ಆಡಳಿತದಲ್ಲಿ ದಿನಕ್ಕೆ ಕೇವಲ ಎರಡು ರೂಪಾಯಿ ಪಡೆಯುತ್ತಿದ್ದ ಕಾರ್ಮಿಕರು ಈಗ ದಿನಕ್ಕೆ ಐದರಿಂದ ಏಳು ರೂಪಾಯಿಗಳನ್ನು ಪಡೆಯುತ್ತಿದ್ದಾರೆ. ಇಡೀ ವರ್ಷ ಕೆಲಸ ದೊರೆಯಲಾರದ ಜನಗಳಿಗಾಗಿ ಸರಕಾರ ಕೆಲಸಕ್ಕಾಗಿ ಆಹಾರ ಯೋಜನೆಯನ್ನು ಜಾರಿಗೆ ತಂದಿದೆ.

ರಿಕ್ಷಾ ಚಾಲಕರ ಸಂಖ್ಯೆ ರಾಜ್ಯದಲ್ಲಿ 1313. ಇವರು ತೆಗೆದುಕೊಂಡ ಎರಡು ಲಕ್ಷ ಸಾಲದಿಂದ ಬಡ್ಡಿ ಭಾರದಲ್ಲಿ ಜೀವನ ನಡೆಸುವುದೇ ದುಸ್ತರವಾಗಿತ್ತಾದ್ದರಿಂದ, ಸರಕಾರವೇ ಅವರ ಸಾಲವನ್ನು ತೀರಿಸಿ, ಅವರನ್ನು ಋಣ ಮುಕ್ತರನ್ನಾಗಿ ಮಾಡಲಾಗಿದೆ.

ಜೀತವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದ್ದು ಜೀತದಾಳುಗಳನ್ನು ನೇಮಿಸಿಕೊಳ್ಳುವವರು ಶಿಕ್ಷೆಗೆ ಗುರಿಯಾಗುತ್ತಾರೆ. ಲಾಕೌಟ್ ಘೋಷಿಸಲಾಗಿದ್ದ ಎಲ್ಲಾ ಕಾರ್ಖಾನೆಗಳನ್ನು ಪುನಃ ಪ್ರಾರಂಭಿಸಲಾಗಿದ್ದು, ಕಿತ್ತುಹಾಕಲಾಗಿದ್ದ ಕಾರ್ಮಿಕರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳಲಾಗಿದೆ.

ಆಡಳಿತ ವರ್ಗದವರೇ ಆರಿಸುವ ಕಾರ್ಮಿಕ ಸಂಘಗಳನ್ನು ಮಾನ್ಯ ಮಾಡುವ ಪದ್ಧತಿ ಕಾಂಗ್ರೆಸ್ ಆಡಳಿತದಲ್ಲಿ ಇತ್ತು. ಈಗ ಅದನ್ನು ಕೊನೆಗಾಣಿಸಿ, ಕಾರ್ಮಿಕರು ರಹಸ್ಯ ಮತದಾನದ ಮೂಲಕ ಆಯ್ಕೆ ಮಾಡುವ ಸಂಘಗಳಿಗೆ ಮಾತ್ರ ಮಾನ್ಯತೆ ನೀಡಲಾಗುತ್ತಿದೆ. ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಲು ತ್ರಿಪಕ್ಷೀಯ ಸಮಿತಿಯೊಂದನ್ನು ನೇಮಿಸಲಾಗಿದ್ದು, ಸಮಿತಿಗೆ ಒಪ್ಪಿಸಿದ ಎಪ್ಪತ್ತು ಕೇಸುಗಳೂ ಕಾರ್ಮಿಕರ ಪರವಾಗಿ ನಿರ್ಣಯವನ್ನು ಪಡೆದಿವೆ. ರಾಜ್ಯದ ಎಲ್ಲಾ ಕಾರ್ಖಾನೆಗಳೂ ಶೇಕಡ 8.33 ರಿಂದ ಶೇಕಡ 20ರವರೆಗೆ ಬೋನಸ್ಸನ್ನು ಪಡೆಯುವುದು ರಾಜ್ಯದ ವೈಶಿಷ್ಟ್ಯ. ಗ್ರಾಮಾಂತರ ಪ್ರದೇಶಗಳಲ್ಲೂ ಕಾರ್ಮಿಕರ ಹಿತವನ್ನು ರಕ್ಷಿಸಲು ಹಳ್ಳಿಗಳಲ್ಲಿ ಸಹಾ ಕಾರ್ಮಿಕ ಇಲಾಖೆಯ ಕಛೇರಿಗಳನ್ನು ತೆರೆಯಲಾಗಿದೆ.

ಗುಡ್ಡಗಾಡು ಜನಾಂಗ:

ರಾಜ್ಯದಲ್ಲಿ ಗುಡ್ಡಗಾಡು ಜನರ ಸಂಖ್ಯೆ ಐದೂವರೆ ಲಕ್ಷ. ಎಡಪಕ್ಷಗಳ ಪ್ರಭಾವವನ್ನು ಕಡಿಮೆಮಾಡಲು ಕಾಂಗ್ರೆಸ್ ಸರಕಾರ ಹೊರಗಿನ ಜನರನ್ನು ತಂದು ರಾಜ್ಯದಲ್ಲಿ ನೆಲೆಸುವಂತೆ ಮಾಡಿದರು. ಬಂಡವಾಳಶಾಹಿ ಪದ್ಧತಿಯ ಪೋಷಕರಾದ ಕಾಂಗ್ರೆಸ್ಸಿಗರು ಮುವತ್ತು ವರ್ಷಗಳಿಂದ ಗುಡ್ಡಗಾಡು ಜನರನ್ನು ಶೋಷಿಸಿ, ಹಿಪ್ಪೆ ಮಾಡಿದ್ದಾರೆ. ಗುಡ್ಡಗಾಡು ಜನರ ಭೂಮಿಯನ್ನು ಹಿಡಿದುಕೊಂಡ ಕಾಂಗ್ರೆಸ್ ಕಂಟ್ರಾಕ್ಟರ್‌ಗಳು ಅವರ ಸಂಸ್ಕೃತಿಯನ್ನೂ ನಾಶ ಮಾಡಿದ್ದಾರೆ. ಗುಡ್ಡಗಾಡು ಜನರ ಐಕ್ಯತೆಯನ್ನು ಹಾಳುಮಾಡಿ ಇಡೀ ಜನಾಂಗದ ಬೆಳವಣಿಗೆಯನ್ನು ನಾಶಮಾಡಿದ ಕಾಂಗ್ರೆಸ್ಸಿಗರು ಅದೇ ಜನರ ಬಗ್ಗೆ ಮೊಸಳೆ ಕಣ್ಣೀರು ಸುರಿಸುತ್ತಿದೆ.

ಗುಡ್ಡಗಾಡು ಜನರಿಂದ ಕಿತ್ತುಕೊಂಡ ಭೂಮಿಯನ್ನು ಅವರಿಗೆ ಸರಕಾರ ವಾಪಸು ಕೊಡಿಸುತ್ತಿದೆ, ಭೂಮಿಯನ್ನು ವಾಪಸುಕೊಟ್ಟ ಇತರೆ ಜನಗಳಿಗೆ ಬೇರೆ ಕಡೆಯಲ್ಲಿ ಎರಡು ಎಕರೆ ಜಮೀನು ಅಥವಾ ರೂ. 5000 ದಿಂದ ರೂ. 9000 ಪರಿಹಾರ ಕೊಡುತ್ತಿದೆ.

ಗುಡ್ಡಗಾಡು ಜನರನ್ನು ವಿವಿಧ ಉದ್ಯೋಗಗಳಿಗೆ ಭರ್ತಿ ಮಾಡಲಾಗುತ್ತಿದೆ. ರಾಜ್ಯದಲ್ಲಿ ಒಬ್ಬ ವಿದ್ಯಾವಂತ ಗುಡ್ಡಗಾಡು ತರುಣನೂ ನಿರುದ್ಯೋಗಿಯಾಗಿಲ್ಲ.

ಹಸಿವಿನಿಂದ ಸಾಯುವ ಸಂಗತಿಗಳು ಕಾಂಗ್ರೆಸ್ ಸರಕಾರಗಳ ಕಾಲದಲ್ಲಿ ಸಾಮಾನ್ಯವಾಗಿದ್ದವು. ಈಗ ಎಡರಂಗ ಸರಕಾರ "ಕೆಲಸಕ್ಕಾಗಿ ಕಾಳು ಮತ್ತು ಬಟ್ಟೆ" ಯೋಜನೆಯನ್ನು ಹಳ್ಳಿ, ಹಳ್ಳಿಯಲ್ಲೂ ಪರಿಣಾಮಕಾರಿಯಾಗಿ ಜಾರಿಗೆ ತರಲಾಗಿದೆ. ಎಡರಂಗ ಸರಕಾರ ಗುಡ್ಡಗಾಡು ಜನರು ಮನೆಕಟ್ಟಿಕೊಳ್ಳಲು, ವೈದ್ಯಕೀಯ ಸಹಾಯ. ಉಚಿತ ಕಾನೂನು ಸಲಹೆ ಹಾಗೂ ಜೀತದ ಸಾಲಗಳನ್ನು ತೀರಿಸಲು ಸಹಾಯ ಮಾಡುತ್ತಿದೆ.

ವಿದ್ಯಾಭ್ಯಾಸ:

ಎಡರಂಗ ಸರಕಾರ ಅಧಿಕಾರಕ್ಕೆ ಬಂದಾಗ 2000ಕ್ಕೂ ಮೇಲ್ಪಟ್ಟು ಶಾಲೆಗಳು ನಡೆಯುವ ಸ್ಥಿತಿಯಲ್ಲಿ ಇರಲಿಲ್ಲ. ಶಾಲೆಗಳು ಸರಿಯಾಗಿ ನಡೆಯುವಂತೆ ವ್ಯವಸ್ಥೆ ಮಾಡಿದ್ದಲ್ಲದೆ. ಪುಸ್ತಕ ಮುಂತಾದುವು ಸುಲಭವಾಗಿ ಸಿಗುವಂತೆ ಮಾಡಲಾಯಿತು. 1800 ವಯಸ್ಕರ ಶಾಲೆಗಳನ್ನು ತೆರೆಯಲಾಗಿದ್ದು ಬರುವ ವರ್ಷಗಳಲ್ಲಿ ಇದರ ಸಂಖ್ಯೆ 2100ಕ್ಕೆ ಏರಲಿದೆ. ಅರವತ್ತು ಮಕ್ಕಳನ್ನು ನೋಡಿಕೊಳ್ಳುವ ಕೇಂದ್ರಗಳನ್ನು, ಇನ್ನೂರ ಎಂಭತ್ತು ಪ್ರಾಥಮಿಕ, ಪ್ರೌಢಶಾಲೆಗಳನ್ನು ಪ್ರಾರಂಭಿಸಲಾಗಿದೆ. 2543 ಉಪಾಧ್ಯಾಯರುಗಳನ್ನು ನೇಮಕ ಮಾಡಿಕೊಳ್ಳಲಾಗಿದೆ. ಸಾಂಸ್ಕೃತಿಕ ಚಟುವಟಿಕೆಗಳನ್ನು ಮನರಂಜನಾ ತೆರಿಗೆಯಿಂದ ಮನ್ನಾ ಮಾಡಿರುವುದಲ್ಲದೆ, ನಾಟಕ ತರಭೇತಿ ನೀಡುವ ಶಾಲೆಯನ್ನು ಪ್ರಾರಂಭಿಸಲು ಪ್ರಯತ್ನ ಮಾಡಲಾಗುತ್ತಿದೆ.

ಎಡರಂಗ ಸರಕಾರ ಅಧಿಕಾರಕ್ಕೆ ಬಂದ ತಕ್ಷಣ ಎಲ್ಲಾ ರಾಜಕೀಯ ಬಂದಿಗಳನ್ನೂ ಬಿಡುಗಡೆ ಮಾಡಿ ಪ್ರಜಾಸತ್ತೆಯನ್ನು ಮತ್ತೆ ನೆಲೆಗೊಳಿಸಿತು. ವಜಾ ಆಗಿದ್ದ ಎಲ್ಲಾ ಸರಕಾರೀ ಮತ್ತು ಕಾರ್ಖಾನೆಗಳ ಕಾರ್ಮಿಕರಿಗೆ ಮತ್ತೆ ಕೆಲಸ ಕೊಡಲಾಯಿತು. ಸಾಮೂಹಿಕ ಸಂಘಟನೆಗಳು ಹಾಗೂ ಚಳುವಳಿಗಳನ್ನು ಮುರಿಯಲು ಪೋಲೀಸರನ್ನು ಕಳುಹಿಸುವುದನ್ನು ನಿಲ್ಲಿಸಲಾಯಿತು.

ಸ್ಥಳೀಯರು ಆಡಳಿತದಲ್ಲಿ ಭಾಗವಹಿಸುವಂತಾಗಲು ಪಂಚಾಯತಿಗಳಿಗೆ ಚುನಾವಣೆಗಳನ್ನು ನಡೆಸಲಾಯಿತು. ರಾಜ್ಯದ ಅರವತ್ತು ಸಾವಿರ ವಿದ್ಯಾವಂತ ನಿರುದ್ಯೋಗಿಗಳ ಪೈಕಿ. ಹದಿನೈದು ಸಾವಿರ ಜನರಿಗೆ ಉದ್ಯೋಗ ಕೊಡಲಾಗಿದೆ. ಇಪ್ಪತ್ತು ತಿಂಗಳಲ್ಲಿ 16,162 ಜನರಿಗೆ 27413.41 ಎಕರೆ ಭೂಮಿಯನ್ನು ಹಂಚಲಾಗಿದೆ. ಇವರಲ್ಲಿ 3174 ಜನ ವಸತಿ ಹೀನರು, 6834 ಜನ ಭೂಹೀನ, ವಸತಿಹೀನರು.

ಕಾಂಗ್ರೆಸ್ ಆಡಳಿತದಲ್ಲಿ 45,000 ಉಪಾಧ್ಯಾಯರುಗಳನ್ನು ತುಂಬಾ ತೊಂದರೆಗೊಳಪಡಿಸಲಾಯಿತು ಎಡರಂಗ ಸರಕಾರ ತುರ್ತುಪರಿಸ್ಥಿತಿಯಲ್ಲಿ ವಜಾ ಆದ 174 ಉಪಾಧ್ಯಾಯರ ಪೈಕಿ 110 ಜನರನ್ನು ಕೆಲಸಕ್ಕೆ ವಾಪಸು ತೆಗೆದುಕೊಳ್ಳಲಾಯಿತು.

ವರ್ಗಾವಣೆ ಪದ್ಧತಿಯಲ್ಲಿ ಮಾರ್ಪಾಡು ಮಾಡಿ ನೌಕರರು ತಮಗೆ ಇಚ್ಛಿಸಿದ ಸ್ಥಳಗಳಲ್ಲಿ ಕೆಲಸ ಮಾಡಲು ಅವಕಾಶ ನೀಡಿರುವುದಲ್ಲದೆ, ಕಷ್ಟಕರ ಸ್ಥಳಗಳಲ್ಲಿ ಯಾರೂ ಎರಡು ವರ್ಷಕ್ಕಿಂತ ಹೆಚ್ಚಿಗೆ ಕೆಲಸ ಮಾಡುವಂತಿಲ್ಲ. ಪೋಲೀಸ್, ಹೋಂಗಾರ್ಡ್ಸ್ ಮತ್ತು ಜೈಲು ಉದ್ಯೋಗಿಗಳಿಗೆ ಸಂಘ ಮಾಡಲು ಅವಕಾಶ ನೀಡಲಾಗಿದೆ. ಕನಿಷ್ಟ ವಿಶ್ರಾಂತಿ ವೇತನದ ಹಣವನ್ನು ರೂ. 90ರಿಂದ ರೂ. 120ಕ್ಕೆ ಏರಿಸಲಾಗಿದೆ.

ಎಡರಂಗ ಸರಕಾರ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದೆ. ಪರಿಮಿತ ಆರ್ಥಿಕ ಮೂಲಗಳು (ರೆವಿನ್ಯೂ ಆದಾಯ ಆರು ಕೋಟಿ ರೂಪಾಯಿ), ಮೂವತ್ತು ವರ್ಷಗಳ ಭ್ರಷ್ಟಾಚಾರ, ಅಧಿಕಾರ ದುರುಪಯೋಗ ಮತ್ತು ರಾಜ್ಯಗಳಿಗಿರುವ ಸೀಮಿತ ಅಧಿಕಾರವೂ ಒಂದು ಸಮಸ್ಯೆಯಾಗಿದೆ. ಆದರೂ ತ್ರಿಪುರಾ ರಾಜ್ಯದ ಸರ್ವತೋಮುಖ ಬೆಳವಣಿಗೆಗಾಗಿ ಎಡರಂಗ ಸರಕಾರ ಶ್ರಮಿಸುತ್ತಿದೆ. ಬಂಡವಾಳಶಾಹಿ ಭೂಮಾಲಕ ಪದ್ಧತಿಯಲ್ಲೂ ಕೇವಲ ಎಡಶಕ್ತಿಗಳು ಮಾತ್ರ ಜನಗಳಿಗೆ ಪರಿಹಾರ ಒದಗಿಸಬಲ್ಲರು ಎಂಬುದನ್ನು ತೋರಿಸಿಕೊಟ್ಟಿದೆ.

●

ಲೋಕಸಭಾ ಚುನಾವಣಾ ಫಲಿತಾಂಶ

[ಒಂದನೇ ಪುಟದಿಂದ]

ಕಾಂಗ್ರೆ ಗೆದ್ದಿದೆ. ಇನ್ನೊಂದು ಸ್ಥಾನದಲ್ಲಿ ಅಲ್ಪಮತಗಳ ಅಂತರದಿಂದ ಸೋತಿದೆ. ಕರ್ನಾಟಕದಲ್ಲಿ ಮಂಗಳೂರು ಕ್ಷೇತ್ರದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಯಾಗಿ ಕಾಂ. ಎಂ. ಕೆ. ಭಟ್ ಸ್ಪರ್ಧಿಸಿದ್ದು, ಒಟ್ಟು ಸಿಂಧು ಮತ 4,45,681 ರಲ್ಲಿ ಇವರಿಗೆ 23619 ಮತಗಳು ದೊರೆತಿವೆ. ಹಾಗೆಯೇ ಬೆಂಗಳೂರು ದಕ್ಷಿಣದಲ್ಲಿ ಅರಸು ಕಾಂಗ್ರೆಸ್, ಸಿ. ಪಿ. ಐ. (ಎಂ) ಮತ್ತಿತರ ಪಕ್ಷಗಳ ಬೆಂಬಲವಿದ್ದು ಸ್ಪರ್ಧಿಸಿದ ಭಾರತ ಕಮ್ಯುನಿಸ್ಟ್ ಪಕ್ಷದ ಕಾಂ. ಎಂ. ಎಸ್. ಕೃಷ್ಣನ್‌ರಿಗೆ ಸುಮಾರು 27 ಸಹಸ್ರ ಮತ ದೊರೆತಿದೆ. ರಾಜ್ಯದಲ್ಲಿ ಎಡಶಕ್ತಿಗಳ ನಿಶ್ಯಕ್ತಿ, ಶ್ರಮಜೀವಿಗಳಲ್ಲಿ ಸರಿಯಾದ ರಾಜಕೀಯ ಪ್ರಜ್ಞೆ ಇಲ್ಲದಿರುವುದು, ಸತತ ಹೋರಾಟಗಳ ಮೂಲಕ ಜನಸಮುದಾಯದ ಮೇಲೆ ಪ್ರಭಾವ ಬೀರದಿರುವುದು ಮೊದಲಾದವುಗಳು ಚುನಾವಣಾ ಫಲಿತಾಂಶದಲ್ಲಿ ಪ್ರತಿಫಲನವಾಗಿವೆ.

ದಿನೇ ದಿನೇ ತೀವ್ರವಾಗುತ್ತಲಿರುವ ಆರ್ಥಿಕ ಬಿಕ್ಕಟ್ಟು ಮತ್ತು ಸಾಮಾಜಿಕ ಸಮಸ್ಯೆಗಳ ಹಿನ್ನೆಲೆಯಲ್ಲಿ ಇಂದಿರಾ ಕಾಂಗ್ರೆಸ್ಸಿನಿಂದ ಜನತೆಗೆ ಪರಿಹಾರ ಸಿಗಲಾರದು. ಜನತೆಯ ಸಮಸ್ಯೆ ಪರಿಹಾರಕ್ಕಾಗಿ ಹೋರಾಟ ನಡೆಸುವುದರೊಡನೆ, ಎಡ ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಿ ಬಂಡವಾಳಶಾಹಿ ಪಥಕ್ಕೆ ಭಿನ್ನವಾದ ಆರ್ಥಿಕ ಸಾಮಾಜಿಕ ಧೋರಣೆಗಳನ್ನು ಜನತೆಯ ಮಧ್ಯೆ ಕೊಂಡೊಯ್ಯಬೇಕಾಗಿದೆ. ಅಂತೆಯೇ ಶ್ರಮಜೀವಿಗಳ ಆರ್ಥಿಕ ಬೇಡಿಕೆಗಳ ಬಗ್ಗೆ ಹೋರಾಡುವುದರೊಡನೆಯೇ ರಾಜಕೀಯ ಪ್ರಜ್ಞೆ ಬೆಳೆಸಲೂ ಹೆಚ್ಚಿನ ಕ್ರಮವಹಿಸಬೇಕಾಗಿದೆ.

●

ಸಂಪಾದಕೀಯ

[ಒಂದನೇ ಪುಟದಿಂದ]

ಅದು ಕರ್ನಾಟಕದಲ್ಲಿ ಆರಂಭವಾಗಲೆಂದು ಹಾರೈಸಿದರು. ವಿವಿಧ ಪಕ್ಷಗಳನ್ನು ಒಂದುಗೂಡಿಸುವ ಪ್ರಯತ್ನಗಳು ಈವರೆಗೆ ವಿಫಲಗೊಂಡಿವೆ. ಅರಸುರವರ ಈ ಹೊಸ ಪ್ರಯತ್ನದ ಭವಿಷ್ಯವನ್ನು ನೋಡಬೇಕಾಗಿದೆ.

ಗುಂಡೂರಾಯರು ಹೊಸ ಸರಕಾರ ರಚನೆ ಮಾಡುವುದರಲ್ಲಿ ವಿಫಲರಾದರೆ ಮುಂದೇನು ಎಂಬ ಪ್ರಶ್ನೆ ಕನ್ನಡಿಗರ ಮುಂದಿದೆ. ರಾಜ್ಯ ಶಾಸನ ಸಭೆಗೂ ಮಧ್ಯವರ್ತಿ ಚುನಾವಣೆ ನಡೆಯಬಹುದೇ ಎಂಬ ಪ್ರಶ್ನೆಯಿದೆ. ಕೆಲವು ದಿನಗಳಲ್ಲಿ ಇದರ ಬಗ್ಗೆ ತೀರ್ಮಾನ ದೊರೆಯಬಹುದು.

ಕರ್ನಾಟಕದಲ್ಲೂ ಎಡಪಕ್ಷಗಳ ಐಕ್ಯತೆ ಬಹಳ ಅಗತ್ಯವಿದೆ. ಇದರ ಬಗ್ಗೆ ಎಲ್ಲರೂ ಆಳವಾಗಿ ವಿಚಾರಮಾಡಿ ಯೋಗ್ಯ ಕ್ರಮಗಳನ್ನು ತೆಗೆದುಕೊಳ್ಳಲು ಮುಂಬರುವರೆಂದು ಆಶಿಸುತ್ತೇವೆ.

ಈ ಚುನಾವಣೆಯಲ್ಲಿ ಮಂಗಳೂರು ಕ್ಷೇತ್ರದಿಂದ ಸ್ಪರ್ಧಿಸಿದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಗೆ ಬೆಂಬಲ ನೀಡಿದ ಮತದಾರರಿಗೂ, ಅವರಿಗೆ ದುಡಿದ ಎಲ್ಲ ಕಾರ್ಯಕರ್ತರಿಗೂ, ಅವರಿಗೆ ಸಹಾಯ ನೀಡಿದ ಎಲ್ಲ ಹಿತೈಷಿಗಳಿಗೂ ನಮ್ಮ ಅಭಿನಂದನೆಗಳು. ●

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist). Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT